# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಜನವರಿ 09, 2022

ಸಂಪುಟ : 48 ಸಂಚಿಕೆ : 239 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com


# ಹರಿಹರ ನಗರದ ಖ್ಯಾತ ಉದ್ಯಮಿದಾರರೂ ಹಾಗೂ ಪ್ರಗತಿಪರ ರೈತ ಮುಖಂಡರಾದ

# ಮಿಠಾಯಿ ಡಿ. ಬಸವರಾಜ್ ನಿಧನ



ಹರಿಹರ ನಗರದ
ಶ್ರೀ ಉಜ್ಜಯಿನಿ ಸಿದ್ದೇಶ್ವರ ವೇರ್ ಹೌಸ್ ( ಶ್ರೀ ಉಜ್ಜಯಿನಿ ಸಿದ್ದೇಶ್ವರ ರೈಸ್ ಮಿಲ್ ಮಾಲೀಕರೂ) ಹಾಗೂ ಪ್ರಗತಿಪರ ರೈತ ಮುಖಂಡರೂ, ಖ್ಯಾತ ಉದ್ಯಮಿದಾರರಾದ ಡಿ. ಹೇಮಂತ್‌ರಾಜ್ ಅವರ ಸಹೋದರರು ಹಾಗೂ ಖ್ಯಾತ ಉದ್ಯಮಿ ಡಿ.ಬಿ. ಮಹದೇವ್ ಅವರ ತಂದೆಯವರಾದ

## ಶ್ರೀ ಮಿಠಾಯಿ ಡಿ. ಬಸವರಾಜ್

ಅವರು ದಿನಾಂಕ 08.01.2022ರ ಶನಿವಾರ ಸಂಜೆ 6 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 61 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ, ಸಹೋದರರು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮಿಠಾಯಿ ಡಿ. ಬಸವರಾಜ್ ಅವರ ಅಂತ್ಯಕ್ರಿಯೆಯನ್ನು **ದಿನಾಂಕ 10.01.2022ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಹರಿಹರ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.**


## ಇಂತಿ ದುಃಖತಪ್ತ ಕುಟುಂಬ ವರ್ಗ

- ಪತ್ನಿ : ಶ್ರೀಮತಿ ಅಕ್ಕಮ್ಮ ಡಿ. ಮಿಠಾಯಿ ಬಸವರಾಜ್
- ಪುತ್ರ : ಡಿ.ಬಿ. ಮಹದೇವ್, ಶ್ರೀಮತಿ ಶಾಂತಲಾ
- ಪುತ್ರಿ : ಶ್ರೀಮತಿ ರೂಪ ಗುರುರಾಜ್, ಹರಿಹರ
- ಪುತ್ರಿ: ಶ್ರೀಮತಿ ದೀಪಾ ನಂದೀಶ್, ಹರಿಹರ

ಸಹೋದರರು :
- ಡಿ. ಹೇಮಂತರಾಜ್ ಮತ್ತು ಮಕ್ಕಳು,
- ದಿ|| ಡಿ.ಉಜ್ಜೇಶ್ ಮತ್ತು ಮಕ್ಕಳು
- ದಿ|| ಡಿ.ನಾಗರಾಜ್ ಮತ್ತು ಮಕ್ಕಳು
- ಡಿ. ಮಂಜುನಾಥ್ ಮತ್ತು ಮಕ್ಕಳು

ಸಹೋದರಿಯರು :
- ಶ್ರೀಮತಿ ಸಿದ್ದಮ್ಮ ದಿ|| ಓಂಕಾರಪ್ಪ ಮತ್ತು ಮಕ್ಕಳು, ದೊಡ್ಡಬಾತಿ.
- ದಿ|| ಶ್ರೀಮತಿ ಸಾಕಮ್ಮ ದಿ|| ಕೆ.ಜಿ. ನಿಂಗಪ್ಪ ಹಲಸಬಾಳು ಇವರ ಮಕ್ಕಳು
- ಶ್ರೀಮತಿ ಗಂಗಮ್ಮ, ಎಬಿಸಿ ಬಸವರಾಜ್ ಅಮರಾವತಿ ಮತ್ತು ಮಕ್ಕಳು
- ಶ್ರೀಮತಿ ರಿಂದಮ್ಮ, ಕರಿಬಸಪ್ಪ ಮತ್ತು ಮಕ್ಕಳು, ಕೊಮಾರನಹಳ್ಳಿ.
- ಶ್ರೀಮತಿ ಗೌರಮ್ಮ, ಶ್ರೀ ರೇವಣಸಿದ್ದಪ್ಪ ಕೋಡಿಹಳ್ಳಿ ಮತ್ತು ಮಕ್ಕಳು
- ಶ್ರೀಮತಿ ಮಹಾದೇವಮ್ಮ, ಶ್ರೀ ಕರಿಗೌಡ್ರು ಸಾಸ್ವಿಹಳ್ಳಿ ಮತ್ತು ಮಕ್ಕಳು
- ಸ್ನೇಹಿತರು, ಬಂಧುಗಳು ಹಾಗೂ ಸಿಬ್ಬಂದಿ ವರ್ಗದವರು

# ಲಾಕ್‌ಡೌನ್‌ಗೆ ಮಿಶ್ರ ಪ್ರತಿಕ್ರಿಯೆ



**ಹರಪನಹಳ್ಳಿ**

ಹರಪನಹಳ್ಳಿ, ಜ.8- ಕೊರೊನಾ ನಿಯಂತ್ರಣಕ್ಕೆ ಮುಂಜಾಗ್ರತೆ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಆದೇಶದ ಪ್ರಯುಕ್ತ ತಾಲ್ಲೂಕಿನಲ್ಲಿ 2 ದಿನಗಳ ಕಾಲ ವೀಕೆಂಡ್ ಲಾಕ್‌ಡೌನ್ ಘೋಷಣೆಗೆ ತಾಲ್ಲೂಕಿನ ಜನ ಶನಿವಾರ ಮಿಶ್ರ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ.

ಹಣ್ಣು, ತರಕಾರಿ, ಕಿರಾಣಿ, ಔಷಧಿ ಅಂಗಡಿಗಳು, ಆಸ್ಪತ್ರೆಗಳು ತೆರೆದಿದ್ದವು.ಹೂವಿನ ಹಾರದ ವ್ಯಾಪಾರ ನಡೆದಿತ್ತು. ಹೋಟೆಲ್‌ಗಳು ಪಾರ್ಸೆಲ್‌ಗೆ ಸೀಮಿತವಾಗಿದ್ದರೂ ವ್ಯಾಪಾರ ಇರಲಿಲ್ಲ.

ಸ್ಥಳೀಯ ಸಾರಿಗೆ ಘಟಕದಿಂದ ಪ್ರತಿದಿನ ಬಿಡುತ್ತಿದ್ದ 34 ಬಸ್ಸುಗಳ ಬದಲಾಗಿ 18 ಬಸ್ಸುಗಳನ್ನು ವಿವಿಧ ಮಾರ್ಗಗಳಿಗೆ ಕಳಿಸಿಕೊಡಲಾಗಿದೆ ಎಂದು ವ್ಯವಸ್ಥಾಪಕರು ತಿಳಿಸಿದ್ದಾರೆ.

ಪ್ರಮುಖ ರಸ್ತೆಗಳಲ್ಲಿ ಬೆರಳಣಿಕೆಯಷ್ಟು ಬೈಕ್ ಸವಾರರು ಸಂಚಾರ ನಡೆಸಿದ್ದರು. ಕೆಲವೊಂದು ಆಟೋಗಳು ಸಂಚಾರ ಕೈಗೊಂಡಿದ್ದವು. ಶಾಲಾ ಕಾಲೇಜುಗಳು, ಸರ್ಕಾರಿ ಕಚೇರಿಗಳು, ಬ್ಯಾಂಕುಗಳು ಬಂದ್ ಆಗಿದ್ದವು. ವಾರದ ಸಂತೆ ರದ್ದಾಗಿತ್ತು.

ವಿವಿಧ ವೃತ್ತಗಳಲ್ಲಿ ಪೊಲೀಸ್ ಹಾಗೂ ಗೃಹ ರಕ್ಷಕದಳದ ಸಿಬ್ಬಂದಿಯನ್ನು ಬಂದೋಬಸ್ತ್‌ಗೆ ನಿಯೋಜನೆ ಮಾಡಲಾಗಿತ್ತು. ತಾಲ್ಲೂಕಿನಲ್ಲಿ ಈವರೆಗೂ ಕೋವಿಡ್ ಒಂದೂ ಪ್ರಕರಣ ವರದಿಯಾಗಿಲ್ಲದಿದ್ದರೂ, ಮುಂಜಾಗೃತಾ ಕ್ರಮವಾಗಿ ನಿಯಮಗಳನ್ನು ಪಾಲಿಸಬೇಕು ಎಂದು ತಾಲ್ಲೂಕು ಆಡಳಿತ ತಿಳಿಸಿದೆ.

## ಧೂಳೆಹೊಳೆಯಲ್ಲಿ ಸಾಮೂಹಿಕ ಸಂಕ್ರಾಂತಿ ಮುಂದೂಡಿಕೆ

ಮಲೇಬೆನ್ನೂರು, ಜ.8- ಧೂಳೆಹೊಳೆ ಗ್ರಾಮದ ತುಂಗಭದ್ರಾ ನದಿ ತಟದಲ್ಲಿರುವ ಜಿಎಂಸಿಜಿ ಪ್ರೌಢಶಾಲೆ ಮುಂಭಾಗದಲ್ಲಿರುವ ಸಮುದಾಯ ಭವನದಲ್ಲಿ ಇದೇ ದಿನಾಂಕ 14 ರಂದು ಆಚರಿಸುವ ಸಾಮೂಹಿಕ ಸಂಕ್ರಾಂತಿ ಹಬ್ಬವನ್ನು ಕೋವಿಡ್ ಕಾರಣದಿಂದಾಗಿ ಮುಂದೂಡಲಾಗಿದೆ ಎಂದು ಸಿರಿಗೆರೆ ನಾಗನಗೌಡ್ರು ತಿಳಿಸಿದ್ದಾರೆ.

# ಅಪೌಷ್ಟಿಕತೆ ನಿವಾರಣೆಗೆ ಎಲ್ಲರೂ ಜವಾಬ್ದಾರಿ ವಹಿಸಿ



**ಶಾಲಾ ಮಕ್ಕಳಿಗೆ ಬಾಳೆಹಣ್ಣು, ಶೇಂಗಾ ಚಿಕ್ಕಿ ವಿತರಿಸುವ ಕಾರ್ಯಕ್ರಮದಲ್ಲಿ ಶಿವನಕೆರೆ ಬಸವಲಿಂಗಪ್ಪ ಕರೆ**

ದಾವಣಗೆರೆ,ಜ.8- ಇಂದಿನ ಮಕ್ಕಳು ನಾಳೆಯ ಪ್ರಜೆಗಳು. ಅವರು, ಬೆಳವಣಿಗೆಯ ಹಂತದಲ್ಲೇ ನಾಶವಾಗುವುದು ಸರಿಯಲ್ಲ. ಅವರ ದೈಹಿಕ ಬೆಳವಣಿಗೆ ಮತ್ತು ಅಪೌಷ್ಟಿಕತೆ ನಿವಾರಣೆಗೆ ಸಾರ್ವಜನಿಕರು, ಸರ್ಕಾರ, ಶಾಲೆಯ ಶಿಕ್ಷಕರು ಜವಾಬ್ದಾರಿಯನ್ನು ವಹಿಸಬೇಕು ಎಂದು ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ಮನವಿ ಮಾಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ದಕ್ಷಿಣ ವಲಯ ಹಾಗೂ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಇವರ ಜಂಟಿ ಆಶ್ರಯದಲ್ಲಿ ಕಾಮ್ರೇಡ್ ಲೆನಿನ್ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಬಿ ಕ್ಯಾಂಪ್ 1, ಬಿ ಕ್ಯಾಂಪ್ 2, ಡಾಂಗೆ ಪಾರ್ಕ್‌ನ ಉರ್ದು ಶಾಲೆ ಮತ್ತು ಕಾಮ್ರೇಡ್ ಲೆನಿನ್ ಶಾಲೆ ಒಟ್ಟು 4 ಶಾಲೆಗಳಿಗೆ ವಾರದ 3 ದಿನಗಳಲ್ಲಿ ಶಾಲಾ ಮಕ್ಕಳಿಗೆ ಅಪೌಷ್ಟಿಕತೆಯನ್ನು ಹೋಗಲಾಡಿಸಲು ಬಾಳೆಹಣ್ಣು, ಶೇಂಗಾ ಚಿಕ್ಕಿ ವಿತರಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮಕ್ಕಳ ಅಪೌಷ್ಟಿಕತೆ ನಿವಾರಣೆಗೆ ಬಾಳೆಹಣ್ಣು ಮತ್ತು ಶೇಂಗಾ ಚಿಕ್ಕಿ ಕೊಡುವ ಕಾರ್ಯಕ್ರಮವನ್ನು ಕರುಣಾ ಟ್ರಸ್ಟ್ 300 ಮಕ್ಕಳಿಂದ ಪ್ರಾರಂಭಿಸಿದ್ದು, ಮುಂದೆ ಹಂತ ಹಂತವಾಗಿ 1000 ಮಕ್ಕಳಿಗೆ ವಿಸ್ತರಿಸುವ ಯೋಜನೆ ಹಾಕಿಕೊಂಡಿದೆ ಎಂದರು.

ನಮ್ಮೆಲ್ಲರಲ್ಲಿ ಅಗತ್ಯವಾಗಿ ಬೇಕಾಗಿರುವ ಜೀವನ ಮೌಲ್ಯಗಳಾದ ಆದರ್ಶ, ಶಿಸ್ತು, ಸಂಸ್ಕಾರ, ಮಾನವೀಯ ಗುಣ, ಸದಾಚಾರ, ಉತ್ತಮ ನಡವಳಿಕೆ, ಪ್ರಾಮಾಣಿಕತೆ ಮುಂತಾದ 84 ಜೀವನ ಮೌಲ್ಯಗಳಿವೆ ಎಂದು ಜೀವನ ಮೌಲ್ಯಗಳಿಗೆ ಸಂಬಂಧಿಸಿದ ಕಥೆಗಳನ್ನು ಹೇಳುತ್ತಾ ಬಸವಲಿಂಗಪ್ಪ ಅವರು ಮಕ್ಕಳ ಗಮನ ಸೆಳೆದರು.

ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ನಿರಂಜನಮೂರ್ತಿ ಮಾತನಾಡಿ, ಮಕ್ಕಳಲ್ಲಿನ ಅಪೌಷ್ಠಿಕತೆಯನ್ನು ಹೋಗಲಾಡಿಸಿ ಅವರ ಸುಂದರ ಭವಿಷ್ಯವನ್ನು ನಿರ್ಮಿಸುವ ಕಾರ್ಯ ನಮ್ಮಿಂದಾಗಬೇಕು ಎಂದರು. ವಾರದ 3 ದಿನಗಳಲ್ಲಿ ಬಾಳೆಹಣ್ಣು ಮತ್ತು ಶೇಂಗಾ ಚಿಕ್ಕಿ ಕೊಡುವ ಶೇ. 33 ಕರುಣಾ ಟ್ರಸ್ಟಿನಿಂದ ಇನ್ನುಳಿದ ಶೇ. 67 ಆಯಾ ಶಾಲೆಯ ಶಿಕ್ಷಕರಿಂದ ಕೊಡಲು ಒಪ್ಪಿದ್ದಕ್ಕಾಗಿ ಶಿಕ್ಷಕರಿಗೆ ಕೃತಜ್ಞತೆ ಸಲ್ಲಿಸಿದರು.

ಸಿ.ಆರ್.ಪಿ. ಶಿವಮೂರ್ತಿ ಅವರು ಮಾತನಾಡಿದರು. ಕಾಮ್ರೇಡ್ ಲೆನಿನ್ ಶಾಲೆಯ ಅಧ್ಯಕ್ಷ ರವೀಂದ್ರ ಅಧ್ಯಕ್ಷತೆ ವಹಿಸಿದ್ದರು.

ಪಾಲಿಕೆಯಿಂದ ರಾಜ್ಯೋತ್ಸವ ಪುರಸ್ಕಾರಕ್ಕೆ ಭಾಜನರಾದ ಪಾಪು ಗುರು, ಸನಾವುಲ್ಲಾ ನವಿಲೇಹಾಳ್ ಅವರನ್ನು ಸನ್ಮಾನಿಸಲಾಯಿತು. ಮುಖ್ಯ ಶಿಕ್ಷಕ ಅಂಜನಪ್ಪ ಸ್ವಾಗತಿಸಿದರು.

# ಎಲೆಬೇತೂರಿನಲ್ಲಿ ಶಾಲಾಭಿವೃದ್ಧಿ ಸಮಿತಿ ತರಬೇತಿ ಶಿಬಿರ



ದಾವಣಗೆರೆ, ಜ.8- ತಾಲ್ಲೂಕಿನ ಎಲೆಬೇತೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾಭಿವೃದ್ಧಿ ಮೇಲುಸ್ತುವಾರಿ ಸಮಿತಿ ಸದಸ್ಯರಿಗೆ, ಶಾಲಾ ಶಿಕ್ಷಕರಿಗೆ ಹಾಗೂ ಪೋಷಕರಿಗೆ ತರಬೇತಿ ಶಿಬಿರ ನಡೆಯಿತು.

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ರಾಂಪುರ ನಾಗರಾಜ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶಾಲಾ ಪದನಿಮಿತ್ತ ಸದಸ್ಯ, ಶಿಕ್ಷಣ ಪ್ರೇಮಿ ಎಂ. ಷಡಕ್ಷರಪ್ಪ ದೀಪ ಹಚ್ಚುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಈ ಸರ್ಕಾರಿ ಶಾಲೆ ಖಾಸಗಿ ಶಾಲೆಗಿಂತಲೂ ಉತ್ತಮವಾದ ವಿಷಯವಾರು ಕೊಠಡಿಗಳನ್ನು ಒಳಗೊಂಡಿದೆ. ಶಾಲೆಯಲ್ಲಿ ಕಂಪ್ಯೂಟರ್ ಶಿಕ್ಷಣ, ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ ಹೀಗೆ ಹಲವು ವಿಧಗಳಲ್ಲಿ ನುರಿತ ಶಿಕ್ಷಕರ ತಂಡವು ಸ್ಮಾರ್ಟ್ ಕ್ಲಾಸ್ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣ ಒದಗಿಸುತ್ತಿರುವುದಲ್ಲದೇ ಮಕ್ಕಳಿಗೆ ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಕಾರ್ಯವೂ ನಡೆಯುತ್ತಿದೆ ಎಂದು ಷಡಾಕ್ಷರಪ್ಪ ಅವರು ತಿಳಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಗ್ರಾ.ಪಂ. ಮಾಜಿ ಅಧ್ಯಕ್ಷ ಬಿ. ವಿರುಪಾಕ್ಷಪ್ಪ ಮಾತನಾಡಿ, ಸರ್ಕಾರದಿಂದ ಉಚಿತವಾಗಿ ಸಿಗುವ ಪಠ್ಯಪುಸ್ತಕ, ಅನ್ನಭಾಗ್ಯ, ಸಮವಸ್ತ್ರ, ಕ್ಷೀರಭಾಗ್ಯ, ವಿದ್ಯಾರ್ಥಿ ವೇತನ ಇಂತಹ ಹಲವು ಸೌಲಭ್ಯಗಳನ್ನು ಕಲ್ಪಿಸಿದೆ. ಇದನ್ನು ಸದುಪಯೋಗಪಡಿಸಿಕೊಂಡು ಪೋಷಕರು ತಮ್ಮ ಮಕ್ಕಳನ್ನು ಸರಿಯಾದ ಸಮಯಕ್ಕೆ ಶಿಸ್ತಿನಿಂದ ಶಾಲೆಗೆ ತಪ್ಪದೇ ಕಳುಹಿಸಿ ಕೊಡಬೇಕು ಎಂದು ಪೋಷಕರಿಗೆ ಕಿವಿಮಾತು ಹೇಳಿದರು.

ಸಿಆರ್‌ಪಿ ಈರಕರಿಯಪ್ಪ, ಶಾಲಾಭಿವೃದ್ಧಿ ಸಮಿತಿ ಉಪಾಧ್ಯಕ್ಷ ಪ್ರಕಾಶ್, ಸದಸ್ಯರಾದ ಬಿ.ಜಿ. ಬಸವರಾಜ್, ಸಲ್ಮಾ, ಉಷಾದೇವಿ, ವೀರಮ್ಮ, ಸುಜಾತ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಶಿಕ್ಷಕರುಗಳಾದ ಬಿ. ಸುಜಾತ, ಜಿ. ವಾಣಿ, ಆರ್. ಅನ್ನಪೂರ್ಣ, ಎನ್. ಗಂಗಮ್ಮ, ಜಿ.ಟಿ. ಕವಿತ ಅವರುಗಳು ಪೋಷಕರಿಗೆ ಮತ್ತು ಮಕ್ಕಳಿಗೆ ಶಿಕ್ಷಣ ಹಾಗೂ ಸಂಸ್ಕಾರ-ಸಂಸ್ಕೃತಿ ಬಗ್ಗೆ ತಿಳುವಳಿಕೆ ನೀಡಿದರು.

ಪ್ರಭಾರಿ ಮುಖ್ಯಶಿಕ್ಷಕ ಎ.ಆರ್. ಗೋಪಾಲಪ್ಪ ಅತಿಥಿಗಳನ್ನು ಸ್ವಾಗತಿಸಿದರು. ಶಿಕ್ಷಕರಾದ ಜಿ.ಎನ್. ಸುಮಿತ್ರ ವಂದಿಸಿದರು. ಬಿ.ಎಂ. ಗಣೇಶಯ್ಯ ನಿರೂಪಿಸಿದರು.

## ಕರ್ಫ್ಯೂಗೆ ಸ್ಪಂದಿಸಿದ ರಾಣೇಬೆನ್ನೂರು



ರಾಣೇಬೆನ್ನೂರು, ಜ. 8- ತಾಲ್ಲೂಕಿನಲ್ಲಿ ಕೋವಿಡ್ ಸೋಂಕಿನ ವರದಿ ಜೀರೋ ಇದ್ದರೂ ಸಹ ಇಲ್ಲಿನ ಬಹುತೇಕ ಜನತೆ, ವರ್ತಕರು ತಮ್ಮ ವ್ಯಾಪಾರ ವಹಿವಾಟು ಬಂದ್ ಮಾಡಿ ಸರ್ಕಾರದ ಆದೇಶದಂತೆ ವಾರಾಂತ್ಯ ಕರ್ಫ್ಯೂಗೆ ಸ್ಪಂದಿಸಿದ್ದಾರೆ.

ಅಲ್ಲಲ್ಲಿ ಬೀದಿ ಬದಿಯ ಹಣ್ಣು, ಇಡ್ಲಿ ವಡಾ ಚಹಾ ವ್ಯಾಪಾರಿಗಳು ಕಂಡು ಬಂದರು. ಹೋಟೆಲ್, ಖಾನಾವಳಿ, ಕಿರಾಣಿ ಅಂಗಡಿಗಳು, ಪೆಟ್ರೋಲ್ ಬಂಕ್, ಔಷಧಿ ಅಂಗಡಿಗಳು, ತರಕಾರಿ ಮಾರುಕಟ್ಟೆ ತೆರೆದಿದ್ದವು. ಗಿರಾಕಿಗಳ ಕೊರತೆ ಇತ್ತು.

ಸರ್ಕಾರಿ ಹಾಗೂ ಖಾಸಗಿ ಶಾಲಾ-ಕಾಲೇಜುಗಳು ರಜಾ ಘೋಷಿಸಿದ್ದರಿಂದ ವಿದ್ಯಾರ್ಥಿಗಳು ಎಲ್ಲೂ ಕಂಡುಬರಲಿಲ್ಲ. ಸರ್ಕಾರಿ ಮತ್ತು ಖಾಸಗಿ ವಾಹನಗಳು, ಅಟೋರಿಕ್ಷಾಗಳು ಸಂಚಾರವಿತ್ತು. ಜೊತೆಗೆ ಪ್ರಯಾಣಿಕರ ಕೊರತೆ ಇತ್ತು. ಅಲ್ಲಲ್ಲಿ ಪೋಲಿಸರು ಸಂಚಾರಿಗಳನ್ನು ತಪಾಸಣೆ ಮಾಡಿದ ದೃಶ್ಯಗಳು ಕಂಡು ಬಂದವು. ಪೋಲಿ ಅಲೆಯುವ ದ್ವಿಚಕ್ರ ವಾಹನಗಳ ಸವಾರರು ಕಾಣಲೇ ಇಲ್ಲ.

## ಪಂಚ ರಾಜ್ಯಗಳ ಚುನಾವಣೆ

**(3ನೇ ಪುಟದಿಂದ)** ನಡೆಯಲಿದ್ದು, 18.3 ಕೋಟಿ ಜನರು ಮತ ಚಲಾಯಿಸುವ ಅರ್ಹತೆ ಪಡೆದುಕೊಂಡಿದ್ದಾರೆ.

ಚುನಾವಣಾ ನೀತಿ ಸಂಹಿತೆಯನ್ನು ತಕ್ಷಣದಿಂದಲೇ ಜಾರಿಗೆ ತರಲಾಗಿದೆ. ಚುನಾವಣೆಯ ಸಂದರ್ಭದಲ್ಲಿ ಕೋವಿಡ್ ಶಿಷ್ಟಾಚಾರವನ್ನು ಕಟ್ಟುನಿಟ್ಟಾಗಿ ಪಾಲಿಸುವುದಾಗಿ ಆಯೋಗ ಹೇಳಿದೆ.

ಚುನಾವಣೆ ನಂತರ ಗೆಲುವಿನ ಸಂಭ್ರಮಾಚರಣೆ ಮೇಲೂ ನಿಷೇಧ ಹೇರಲಾಗಿದೆ. ವಿಜೇತ ಅಭ್ಯರ್ಥಿಯ ಜೊತೆ ಕೇವಲ ಇಬ್ಬರು ತೆರಳಿ ಗೆಲುವಿನ ಪ್ರಮಾಣ ಪತ್ರ ಪಡೆಯಲು ಅವಕಾಶ ನೀಡಲಾಗುವುದು.

ಐದು ರಾಜ್ಯಗಳಲ್ಲಿ 15 ಕೋಟಿ ಜನರು ಒಂದು ಡೋಸ್ ಹಾಗೂ ಒಂಭತ್ತು ಕೋಟಿ ಜನರು ಎರಡು ಡೋಸ್ ಲಸಿಕೆ ಪಡೆದಿದ್ದಾರೆ. ಲಸಿಕಾ ಪ್ರಕ್ರಿಯೆ ಚುರುಕುಗೊಳಿಸಲು ರಾಜ್ಯಗಳಿಗೆ ತಿಳಿಸಲಾಗಿದೆ.

## ರಾಣೇಬೆನ್ನೂರಿನಲ್ಲಿ ಧರಣಿ ವಾಪಸ್

ರಾಣೇಬೆನ್ನೂರು, ಜ.8 - ಸಾರ್ವಜನಿಕ ರಸ್ತೆಯಲ್ಲಿ ಅನಧಿಕೃತವಾಗಿ ಮನೆ ನಿರ್ಮಿಸಲು ಕುಮ್ಮಕ್ಕು ನೀಡಿದ ನಗರಸಭೆ ಹಾಗೂ ಭೂಮಾಪನ ಇಲಾಖೆ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವಂತೆ ಆಗ್ರಹಿಸಿ ಕಳೆದ 17 ದಿನಗಳಿಂದ ನಗರಸಭೆ ಎದುರು ಧರಣಿ ನಡೆಸುತ್ತಿದ್ದು, ಈಗ ಕೋವಿಡ್ ಕಾರಣದಿಂದ ಧರಣಿಯನ್ನು ಹಿಂಪಡೆಯಲಾಗಿದೆ. ಮುಂದಿನ ದಿನಗಳಲ್ಲಿ ಕೋವಿಡ್ ಕಡಿಮೆಯಾದ ನಂತರ ಪ್ರತಿಭಟನೆ ಹಾದಿ ಮುಂದುವರೆಸಲಾಗುವುದು ಎಂದು ವಕೀಲ ಸಂಜಯ್‌ಕುಮಾರ್ ಐರಣಿ ಅವರು ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ. ಹನುಮಂತಪ್ಪ ಕಬ್ಬಾರ, ಶಿವಾನಂದ ಮಂಥಗೊಂಡರ, ಕಿರಣ ಗುಳೇದ, ಕಲ್ಲೇಶಪ್ಪ ಆಣೂರ ಉಪಸ್ಥಿತರಿದ್ದರು.

# ವಾರಾಂತ್ಯದ ಕರ್ಫ್ಯೂಗೆ ಉತ್ತಮ ಸ್ಪಂದನೆ

**(3ನೇ ಪುಟದಿಂದ)** ಶನಿವಾರವಾಗಿದ್ದರಿಂದ ಆಂಜನೇಯನ ದೇವಸ್ಥಾನಗಳಲ್ಲಿ ಭಕ್ತರು ಕಂಡು ಬಂದರು.

**ಬಣಗುಟ್ಟಿದ ತರಕಾರಿ ಮಾರುಕಟ್ಟೆ:** ಬೆಳಿಗ್ಗೆಯೇ ವ್ಯಾಪಾರಿಗಳು, ರೈತರು, ಗ್ರಾಹಕರಿಂದ ಗಿಜಿ ಗುಡುತ್ತಿದ್ದ ತರಕಾರಿ ಮಾರುಕಟ್ಟೆ ಬಣಗುಡುತ್ತಿತ್ತು. ಹೋಲ್ ಸೇಲ್ ವ್ಯಾಪಾರಿಗಳು ಗ್ರಾಹಕರ ನಿರೀಕ್ಷೆಯಲ್ಲಿದ್ದರು. ಬೆರಳೆಣಿಕೆಯಷ್ಟು ಜನರು ಮಾತ್ರ ತರಕಾರಿ ಕೊಂಡೊಯ್ದರು. ಇತ್ತ ತಹಶೀಲ್ದಾರ್ ಕಚೇರಿ ಮುಂಭಾಗ ರಸ್ತೆ ಬದಿ ತರಕಾರಿ ಮಾರುತ್ತಿದ್ದವರ ಬಳಿ ಇದ್ದ ತರಕಾರಿ ಸಂಜೆಯಾದರೂ ಖಾಲಿಯಾಗದೇ ಉಳಿದಿತ್ತು.

**ಮದ್ಯ ಪ್ರಿಯರ ಪ್ರದಕ್ಷಿಣೆ:** ಕರ್ಫ್ಯೂ ಹಿನ್ನೆಲೆಯಲ್ಲಿ ಬಾಗಿಲು ಹಾಕಿದ್ದ ಬಾರ್‌ಗಳ ಸುತ್ತ ರಾತ್ರಿ ಮದ್ಯಪ್ರಿಯರ ಓಡಾಟ ಕಂಡು ಬರುತ್ತಿತ್ತು. ದರ ತುಸು ಹೆಚ್ಚಾದರೂ, ಕದ್ದು ಮುಚ್ಚಿ ಎಲ್ಲಾದರೂ ಹೆಂಡ ಸಿಗಬಹುದಾ ಎಂದು ಬಾರ್‌ಗಳ ಸುತ್ತ ಪ್ರದಕ್ಷಿಣೆ ಹಾಕುತ್ತಿದ್ದ ಹಲವರು ಮದ್ಯ ಪಡೆಯುವಲ್ಲಿ ಯಶಸ್ವಿಯೂ ಆಗುತ್ತಿದ್ದರು.

**ಪೊಲೀಸರ ಗಸ್ತು:** ಬೆಳಿಗ್ಗೆ ಪೊಲೀಸರು ಗಸ್ತು ತಿರುಗುತ್ತಿದ್ದರು. ಪಿ.ಬಿ. ರಸ್ತೆ ಸೇರಿದಂತೆ ಕೆಲ ಪ್ರಮುಖ ರಸ್ತೆಗಳಲ್ಲಿ ಕೆಲ ವಾಹನಗಳನ್ನು ತಡೆದು ಕಾರಣ ಕೇಳುತ್ತಿದ್ದುದು ಕಂಡು ಬಂತು. ಸಂಜೆ ಮತ್ತೆ ಗಸ್ತು ಹೆಚ್ಚಾಗಿತ್ತು. ಮನೆಯಲ್ಲಿ ಕೂರಲಾಗದೇ ಸಂಜೆ ಬಾಗಿಲು ತೆರೆಯಲ್ಪಟ್ಟಿದ್ದ ಅಂಗಡಿಗಳನ್ನು ಮತ್ತೆ ಮುಚ್ಚಿಸಿದರು.

## ಜಗಳೂರಲ್ಲಿ ಪೂರ್ಣ ಸಹಕಾರ



**(3ನೇ ಪುಟದಿಂದ)** ಬಟ್ಟೆ, ಆಭರಣ, ಮದ್ಯ ಇತರೆ ಅಂಗಡಿಗಳು ಬಂದ್ ಆಗಿದ್ದವು. ಬೈಕ್, ಆಟೋ, ಬಸ್ ಸಂಚಾರ ದಟ್ಟಣೆ ಇರಲಿಲ್ಲ.

**ದೇವಸ್ಥಾನಗಳಲ್ಲಿ ಹೆಚ್ಚಿನ ಭಕ್ತರಿಗೆ ಅವಕಾಶವಿಲ್ಲ:** ಪಟ್ಟಣದ ಈಶ್ವರ ದೇವಸ್ಥಾನ ಸೇರಿದಂತೆ ತಾಲ್ಲೂಕಿನ ಮಡ್ರಹಳ್ಳಿ ಚೌಡೇಶ್ವರಿ, ಕೊಡದಗುಡ್ಡದ ವೀರಣ್ಣ, ಕೊಣಚಗಲ್ ರಂಗನಾಥ,ಆಂಜನೇಯ ಸೇರಿದಂತೆ ದೇವಸ್ಥಾನಗಳಲ್ಲಿ ಸರ್ಕಾರದ ಆದೇಶದಂತೆ ಹೆಚ್ಚಿನ ಭಕ್ತಾದಿಗಳಿಗೆ ಪ್ರವೇಶ ನಿರಾಕರಣೆ ಹಿನ್ನೆಲೆಯಲ್ಲಿ ಬಾಗಿಲು ಮುಚ್ಚಿ ಬಿಕೋ ಎನ್ನುತ್ತಿದ್ದವು.

**ಮಾಸ್ಕ್ ಕಣ್ಮರೆ:** ಅಗತ್ಯ ವಸ್ತುಗಳ ಖರೀದಿಗೆ ಆಗಮಿಸುತ್ತಿದ್ದ ಸಾರ್ವಜನಿಕರು ಮಾಸ್ಕ್ ಧರಿಸದೆ ಅಲ್ಲಲ್ಲಿ ಓಡಾಡುತ್ತಿರುವುದು ಕಂಡುಬಂದಿತು. ಪೊಲೀಸರು ಜಾಗೃತಿ ಮೂಡಿಸಿ ಮಾಸ್ಕ್ ಧರಿಸುವಂತೆ ಸೂಚಿಸಿದರು.

## ರಾಜ್ಯ ಸ್ತಬ್ಧ, ಜನಜೀವನ ಅಸ್ತವ್ಯಸ್ತ

**(3ನೇ ಪುಟದಿಂದ)** ಸೇವೆಗೂ ಅಡ್ಡಿ ಇಲ್ಲ. ಹೋಟೆಲ್‌ಗಳಿಗೆ ಪಾರ್ಸೆಲ್‌ಗೆ ಮಾತ್ರ ಅವಕಾಶ ಮಾಡಿಕೊಟ್ಟಿದ್ದಾರೆ.

ಹಣ್ಣು ತರಕಾರಿ, ಪಡಿತರ ಹಾಗೂ ಔಷಧಿ ಅಂಗಡಿಗಳಿಗೆ ಎಂದಿನಂತೆ ಕಾರ್ಯನಿರ್ವಹಿಸಲಿವೆ. ಉಳಿದಂತೆ ಎಲ್ಲವೂ ಬಂದ್ ಆಗಿದೆ.

ಕರ್ಫ್ಯೂ ಯಶಸ್ವಿಗೊಳಿಸಲು ಪೊಲೀಸರು ರಾಜ್ಯಾದ್ಯಂತ ಮುಂಜಾನೆಯೇ ಬೀದಿಗಿಳಿದು, ಸಾರ್ವಜನಿಕರನ್ನು ಎಚ್ಚರಿಸುವ ಹಾಗೂ ಅಗತ್ಯ ಸೇವೆ ಅಲ್ಲದೆ ಅಂಗಡಿ ಮುಂಗಟ್ಟು ತೆರೆದರೆ ಮುಚ್ಚಿಸುವ ಕೆಲಸ ನಡೆಸಿದರು.

## ಕರ್ಫ್ಯೂಗೆ ಹರಿಹರ ಸ್ತಬ್ಧ



**(3ನೇ ಪುಟದಿಂದ)** ಕಂಡು ಬಂದಿತ್ತಾದರೂ, ಪ್ರಯಾಣಿಕರ ಕೊರತೆ ಇತ್ತು. ಕೆಲವು ಬಸ್‌ಗಳಲ್ಲಿ ಇಬ್ಬರು - ಮೂವರು ಮಾತ್ರ ಸಂಚಾರ ಮಾಡಿದರು.

ಸಾರ್ವಜನಿಕರ ಓಡಾಟ ಕಡಿಮೆ ಪ್ರಮಾಣದಲ್ಲಿ ಇದ್ದುದರಿಂದ ಅಗತ್ಯ ವಸ್ತುಗಳ ಅಂಗಡಿಗಳು ತೆರೆದಿದ್ದರೂ, ವಹಿವಾಟು ಕಡಿಮೆ ಇತ್ತು. ಹೋಟೆಲ್‌ನಲ್ಲಿ ಪಾರ್ಸೆಲ್‌ಗೆ ಮಾತ್ರ ಅವಕಾಶ ಇದ್ದುದರಿಂದ ಅರ್ಧದಷ್ಟು ಬಾಗಿಲು ತೆರೆದುಕೊಂಡು ಪಾರ್ಸೆಲ್ ಕೊಟ್ಟಿದ್ದು ಕಂಡು ಬಂತು.

ಉಳಿದಂತೆ ಬಟ್ಟೆ, ಮದ್ಯ, ಬಂಗಾರ, ಆಟೋಮೊಬೈಲ್, ಎಲೆಕ್ಟ್ರಾನಿಕ್, ಎಲೆಕ್ಟ್ರಿಕಲ್, ಸಿಮೆಂಟ್, ಕಬ್ಬಿಣ, ಸ್ಟೇಷನರಿ, ಟೈಲರ್ , ಗ್ಯಾರೇಜ್, ಸಿನಿಮಾ ಟಾಕೀಸ್, ಮಾಲ್, ಮೊಬೈಲ್ ಸೇರಿದಂತೆ ಇತರೆ ಅಂಗಡಿಗಳು ಬಂದ್ ಆಗಿದ್ದವು. ಟ್ಯಾಕ್ಸಿ , ಮಜ್ದಾ, ಲಾರಿ ಸಂಚಾರ ಕೂಡ ಸ್ಥಗಿತಗೊಂಡಿದ್ದವು. ಒಟ್ಟಾರೆಯಾಗಿ ವಾರಾಂತ್ಯದ ಕರ್ಫ್ಯೂಗೆ ಉತ್ತಮ ರೀತಿಯ ಬೆಂಬಲವನ್ನು ಸಾರ್ವಜನಿಕರು ನೀಡಿದರು.

ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಮತ್ತು ನಗರಸಭೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸಾರ್ವಜನಿಕರು ಹೆಚ್ಚಾಗಿ ಓಡಾಡಲು ಅವಕಾಶವನ್ನು ನೀಡದೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡರು.


॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆಯ ಆಹ್ವಾನ ಪತ್ರಿಕೆ**



ದಾವಣಗೆರೆ ವಾಸಿ
**ಶ್ರೀಮತಿ ಸ್ವರ್ಣಕುಮಾರಿ ಮತ್ತು ಶ್ರೀ ಯಜಮಾನ್ ಶ್ರೀಮೋತಿ ರೇವಣಸಿದ್ದಪ್ಪ**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 30.12.2021ನೇ ಗುರುವಾರ ರಾತ್ರಿ 10.30ಕ್ಕೆ ನನ್ನ ಸಹೋದರ
**ಶ್ರೀ ಯಜಮಾನ್ ಮೋತಿ ಮಹಾದೇವಪ್ಪ**
ಇವರು ಕೈಲಾಸ ವಾಸಿಯಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
**ದಿನಾಂಕ 09.1.2022 ರ ಭಾನುವಾರ ಬೆಳಿಗ್ಗೆ 11.30ಕ್ಕೆ ಶ್ರೀ ಬಸವ ಮಂಟಪ, ದೊಡ್ಡಪೇಟೆ, ದಾವಣಗೆರೆ** ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು: **ಯಜಮಾನ್ ಮೋತಿ ಸಹೋದರರು ಹಾಗೂ ಸುಪುತ್ರ ಚಿ॥ ಯಜಮಾನ್ ಮೋತಿ ಹೇಮಂತ್ ಹಾಗೂ ಬಂಧು ಮಿತ್ರರು. ಮೊ: 94489 44513**


## ಎಸ್. ನಿಂಗಪ್ಪ ತಾವರೆಗೊಂದಿ ನಿಧನ



ದಾವಣಗೆರೆ ತಾಲೂಕು ದೊಡ್ಡ ಬಾತಿ ಗ್ರಾಮದ ವಾಸಿ ಎಸ್. ನಿಂಗಪ್ಪ ತಾವರೆಗೊಂದಿ (65) (ಕೆ.ಪಿ.ಟಿ.ಸಿ.ಎಲ್ ನಿವೃತ್ತ ಜ್ಯೂನಿಯರ್ ಅಸಿಸ್ಟೆಂಟ್ ಹಡಗಲಿ) ಇವರು ದಿನಾಂಕ 08.1.2022ರ ಬೆಳಿಗ್ಗೆ 9 ಗಂಟೆಗೆ ನಿಧನರಾದರು. ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 09.01.2022ರ ಭಾನುವಾರ ಬೆಳಿಗ್ಗೆ 10.30ಕ್ಕೆ ಸ್ವಗ್ರಾಮದ ರುದ್ರಭೂಮಿಯಲ್ಲಿ ನೆರವೇರಲಿದೆ.

## ಕೊಕ್ಕನೂರು ಗ್ರಾಮದ ಕೆ.ಹೆಚ್. ಕೊಟ್ರಪ್ಪ ನಿಧನ



ಹರಿಹರ ತಾಲ್ಲೂಕಿನ ಕೊಕ್ಕನೂರು ಗ್ರಾಮದ
ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಸಮಿತಿಯ ಸದಸ್ಯರೂ,
ಗ್ರಾ.ಪಂ. ಮಾಜಿ ಅಧ್ಯಕ್ಷರೂ,
ಹರಿಹರ ಎಪಿಎಂಸಿ ಮಾಜಿ ಸದಸ್ಯರೂ ಆದ
**ಶ್ರೀ ಕೆ.ಹೆಚ್ ಕೊಟ್ರಪ್ಪ** (70 ವರ್ಷ)
ಅವರು ದಿನಾಂಕ 08.01.2022ರ ಶನಿವಾರ ರಾತ್ರಿ 10.45ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ನಾಲ್ವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿಂದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 09.01.2022ರ ಭಾನುವಾರ ಮಧ್ಯಾಹ್ನ 1 ಗಂಟೆಗೆ ಕೊಕ್ಕನೂರಿನಲ್ಲಿ ನೆರವೇರಲಿದೆ.

## ವಿದ್ಯುತ್ ಅವಘಡದಲ್ಲಿ ಉದ್ಯಮಿ ಮಿಠಾಯಿ ಬಸವರಾಜ್ ನಿಧನ



**ಹರಿಹರ**

ಹರಿಹರ, ಜ.8- ನಗರದ ಅಗಸನಕಟ್ಟೆ ಅಡಿಕೆ ತೋಟದಲ್ಲಿ ಇಂದು ವಿದ್ಯುತ್ ಅವಘಡ ಸಂಭವಿಸಿದ್ದು, ನಗರದ ಹೆಸರಾಂತ ಉದ್ಯಮಿ ಮತ್ತು ಪ್ರಗತಿಪರ ರೈತ ಮುಖಂಡರಾದ ಮಿಠಾಯಿ ಡಿ. ಬಸವರಾಜ್ ನಿಧನರಾಗಿದ್ದಾರೆ.

ಬಸವರಾಜ್ ಅವರು ಪತ್ನಿ ಅಕ್ಕಮ್ಮನವರ ಜೊತೆಗೆ ದೇವರಿಗೆ ಪೂಜೆ ಸಲ್ಲಿಸಲೆಂದು ತಮ್ಮ ಅಡಿಕೆ ತೋಟಕ್ಕೆ ಹೋಗಿದ್ದರು. ತೋಟದಲ್ಲಿ ಇರುವ ಮರದ ಹತ್ತಿರ ವಿದ್ಯುತ್ ತಂತಿ ಹರಿದಿರುವುದನ್ನು ಸರಿಪಡಿಸಲು ಬಸವರಾಜ್ ಅವರು ಮುಂದಾದ ಸಂದರ್ಭದಲ್ಲಿ ವಿದ್ಯುತ್ ತಗುಲಿ ಮೃತಪಟ್ಟಿದ್ದಾರೆ.

ಈ ವೇಳೆ ಇನ್ನೋರ್ವ ವ್ಯಕ್ತಿ ಹುಚ್ಚಪ್ಪ ಎಂಬುವವರಿಗೂ ವಿದ್ಯುತ್ ತಗಲಿದ್ದು, ಅವರನ್ನು ದಾವಣಗೆರೆಯ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಅವರು ಪ್ರಾಣಪಾಯದಿಂದ ಪಾರಾಗಿದ್ದಾರೆ. ಸ್ಥಳಕ್ಕೆ ದಾವಣಗೆರೆ ಪೊಲೀಸ್ ಠಾಣೆಯ ಅಧಿಕಾರಿಗಳು ಭೇಟಿ ಪರಿಶೀಲಿಸಿದರು.

## ಅಭಿವೃದ್ಧಿ ಪಡಿಸಿದ ನಿಲ್ದಾಣಗಳಿಗೆ ಶುಲ್ಕ

**(3ನೇ ಪುಟದಿಂದ)** ನಿಲ್ದಾಣಗಳು ಕಾರ್ಯಾರಂಭ ಮಾಡಿದ ನಂತರವೇ ಶುಲ್ಕ ವಸೂಲಿ ಮಾಡಲಾಗುವುದು ಎ.ಸಿ. ದರ್ಜೆಯ ಪ್ರಯಾಣಿಕರಿಂದ 50 ರೂ, ಸ್ಲೀಪರ್ ದರ್ಜೆಯ ಪ್ರಯಾಣಿಕರಿಂದ 25 ರೂ. ಹಾಗೂ ಕಾಯ್ದಿರಿಸದ ಟಿಕೆಟ್ ವರ್ಗದವರಿಂದ 10 ರೂ. ಶುಲ್ಕ ಪಡೆಯಲಾಗುವುದು. ನಗರ ರೈಲುಗಳಲ್ಲಿ ಸಂಚರಿಸುವವರಿಂದ ಯಾವುದೇ ಶುಲ್ಕ ಪಡೆಯುವುದಿಲ್ಲ ಎಂದು ರೈಲ್ವೆ ಮಂಡಳಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ನಿಲ್ದಾಣಗಳಲ್ಲಿನ ಪ್ಲಾಟ್‌ಫಾರಂ ಟಿಕೆಟ್ ದರವೂ ಸಹ 10 ರೂ. ಗಳಷ್ಟು ದುಬಾರಿಯಾಗಲಿದೆ. ಹತ್ತುವ ಹಾಗೂ ಇಳಿಯುವ ಎರಡೂ ನಿಲ್ದಾಣಗಳೂ ಮರು ಅಭಿವೃದ್ಧಿಯಾಗಿದ್ದರೆ ಶುಲ್ಕ ಒಂದೂವರೆ ಪಟ್ಟು ಹೆಚ್ಚಾಗಲಿದೆ. ಈ ದರ ಎಲ್ಲಾ ನಿಲ್ದಾಣಗಳಿಗೂ ಒಂದೇ ರೀತಿಯದ್ದಾಗಿರಲಿದೆ. ಇದು ರೈಲ್ವೆ ಪ್ರಯಾಣ ದರಕ್ಕಿಂತ ಪ್ರತ್ಯೇಕವಾಗಿರಲಿದೆ. ಜಿ.ಎಸ್.ಟಿ. ಅನ್ವಯವಾಗಲಿದೆ. ಈ ಶುಲ್ಕದಿಂದಾಗಿ ರೈಲ್ವೆಗೆ ನಿರಂತರ ಆದಾಯ ಬರಲಿದೆ. ಇದರಿಂದ ರೈಲ್ವೆಯು ಖಾಸಗಿ ಹೂಡಿಕೆದಾರರನ್ನು ಸೆಳೆಯಲು ಸಾಧ್ಯವಾಗಲಿದೆ ಎಂಬ ನಿರೀಕ್ಷೆ ಇದೆ.

## ಪತ್ರಕರ್ತ ಭರಮಸಾಗರ ವಿಜಯ್‌ಗೆ ಸನ್ಮಾನ



ಭರಮಸಾಗರ, ಜ.8 - ಕಲ್ಬುರ್ಗಿಯಲ್ಲಿ ಇತ್ತೀಚೆಗೆ ಮೊನ್ನೆ ನಡೆದ ರಾಜ್ಯ ಮಟ್ಟದ ಪತ್ರಕರ್ತರ ಸಮ್ಮೇಳನದಲ್ಲಿ ಕರ್ನಾಟಕ ರಾಜ್ಯ ಪತ್ರಿಕಾ ಪ್ರಶಸ್ತಿ ಪಡೆದ ಪತ್ರಕರ್ತ ವಿಜಯ್ ಭರಮಸಾಗರ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು

ಈ ಸಂದರ್ಭದಲ್ಲಿ ಸಿ.ಟಿ. ಮಾಂತೇಶ್, ಶಮೀಮ್ ಪಾಷ, ಎಸ್‌ಎಂಎಲ್ ಪ್ರವೀಣ್, ತುರುವನೂರು ನಟರಾಜ್ , ಡಿ.ಸಿ. ಕೊಟ್ರೇಶ್, ಅನಿಲ್ ಕುಮಾರ್, ಎಂ.ಕೆ. ಸಂತೋಷ್, ಡಾ. ದರ್ಶನ್, ನಿಸರ್ಗ ಸಂತೋಷ್, ಅಪ್ಪು, ವಿಜಯ್, ಜೆಸಿಬಿ ರಾಮಚಂದ್ರಪ್ಪ, ಚಂದ್ರು, ವೀರೇಶ್, ಪ್ರದೀಪ, ನಾಗೇಂದ್ರಪ್ಪ, 'ಜನತಾವಾಣಿ' ವರದಿಗಾರ ಬಿ.ಜೆ. ಅನಂತಪದ್ಮನಾಭರಾವ್ ಮತ್ತು ಇತರರು ಹಾಜರಿದ್ದರು.

## ಮಲೇಬೆನ್ನೂರಿನಲ್ಲಿ ವೀಕೆಂಡ್ ಕರ್ಫ್ಯೂ ಯಶಸ್ವಿ



ಮಲೇಬೆನ್ನೂರು, ಜ.8- ರಾಜ್ಯದಲ್ಲಿ ಕೊರೊನಾ 3ನೇ ಅಲೆ ಹರಡುತ್ತಿರುವ ಹಿನ್ನೆಲೆಯಲ್ಲಿ, ಮುಂಜಾಗ್ರತಾ ಕ್ರಮವಾಗಿ ಸರ್ಕಾರದ ವೀಕೆಂಡ್ ಕರ್ಫ್ಯೂ ಶನಿವಾರ ಬಹುತೇಕ ಯಶಸ್ವಿಯಾಯಿತು.

ಬೆಳಿಗ್ಗೆಯಿಂದಲೇ ಅಗತ್ಯ ವಸ್ತುಗಳ ಅಂಗಡಿ-ಹೋಟೆಲ್‌ಗಳನ್ನು ಹೊರತುಪಡಿಸಿ, ಉಳಿದೆಲ್ಲಾ ಅಂಗಡಿ ಮುಂಗಟ್ಟುಗಳು ಬಂದ್ ಆಗಿದ್ದವು. ಜನರ ಹಾಗೂ ವಾಹನಗಳ ಓಡಾಟ ವಿರಳವಾಗಿತ್ತು.

ಪಿಎಸ್‌ಐ ರವಿಕುಮಾರ್ ನೇತೃತ್ವದಲ್ಲಿ ಪೊಲೀಸರು ಪಟ್ಟಣದಲ್ಲಿ ಅನಗತ್ಯವಾಗಿ ಮಾಸ್ಕ್ ಧರಿಸದೆ ಸುತ್ತಾಡುತ್ತಿದ್ದವರಿಗೆ ಲಾಠಿ ರುಚಿ ತೋರಿಸಿದರು. ಉಪತಹಶೀಲ್ದಾರ್ ಆರ್. ರವಿ ಪುರಸಭೆ ಮುಖ್ಯಾಧಿಕಾರಿ ಡೊಂಬರ್ ಹಾಗೂ ಪುರಸಭೆ ಅಧಿಕಾರಿಗಳು ವೀಕೆಂಡ್ ಕರ್ಫ್ಯೂ ಯಶಸ್ಸಿಗೆ ಶ್ರಮಿಸಿದರು.

## ಜಗಳೂರಿನಲ್ಲಿ ಮನೆ ಕಳ್ಳತನ

ಜಗಳೂರು, ಜ.8- ಪಟ್ಟಣದ ತುಮಟಿ ಲೇಔಟ್ ನಲ್ಲಿ ಮನೆಯಲ್ಲಿದ್ದ ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣಗಳನ್ನು ದೋಚಿರುವ ಘಟನೆ ನಡೆದಿದೆ.

ಬಟ್ಟೆ ವ್ಯಾಪಾರಿ ಮಲ್ಲಿಕಾರ್ಜುನ ಅವರು ಕುಟುಂಬ ಸಮೇತ ಮಂಗಳವಾರ ಶ್ರೀಶೈಲಕ್ಕೆ ತೆರಳಿದ್ದ ಸಂದರ್ಭದಲ್ಲಿ ಈ ಕಳ್ಳತನ ನಡೆದಿದೆ. ಘಟನಾ ಸ್ಥಳಕ್ಕೆ ಜಗಳೂರು ಪೊಲೀಸ್ ಸಿಬ್ಬಂದಿ ಶ್ವಾನದಳದೊಂದಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು.

# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಜನವರಿ 09, 2022


# ವಾರಾಂತ್ಯದ ಕರ್ಫ್ಯೂಗೆ ಉತ್ತಮ ಸ್ಪಂದನೆ

## ಬಿಕೋ ಎನ್ನುತ್ತಿದ್ದ ದಾವಣಗೆರೆ ರಸ್ತೆಗಳು, ಅಗತ್ಯ ವಸ್ತುಗಳ ಮಾರಾಟಕ್ಕೆ ಗ್ರಾಹಕರ ಕೊರತೆ

ದಾವಣಗೆರೆ, ಜ.8- ಕೊರೊನಾ ಹಿನ್ನೆಲೆಯಲ್ಲಿ ಸರ್ಕಾರ ಜಾರಿ ಮಾಡಿರುವ ವಾರಾಂತ್ಯದ ಕರ್ಫ್ಯೂಗೆ ನಗರದಲ್ಲಿ ಉತ್ತಮ ಸ್ಪಂದನೆ ವ್ಯಕ್ತವಾಗಿದೆ, ಬಹುತೇಕ ನಗರ ಸ್ತಬ್ಧವಾಗಿತ್ತು.

ಅಗತ್ಯ ವಸ್ತುಗಳ ಮಾರಾಟ ಹೊರತು ಪಡಿಸಿದರೆ ಬೆಳಿಗ್ಗೆಯಿಂದಲೇ ಬಹುಪಾಲು ಅಂಗಡಿ ಮುಂಗಟ್ಟುಗಳು ಬಾಗಿಲು ತೆರೆಯಲಿಲ್ಲ. ಅಲ್ಲಲ್ಲಿ ಕೆಲವರು ಬಾಗಿಲು ತೆರೆಯುತ್ತಿದ್ದರಾದರೂ, ಪೊಲೀಸರು ಮನವೊಲಿಸಿ ಬಾಗಿಲು ಮುಚ್ಚಿಸಿದರು.

ಎರಡನೇ ಶನಿವಾರವೂ ಆಗಿದ್ದರಿಂದ ಸರ್ಕಾರಿ ಕಚೇರಿಗಳಿಗೆ ರಜೆ ಇತ್ತು. ಪರಿಣಾಮ ನೌಕರರು, ಸಿಬ್ಬಂದಿಗಳು ಮನೆ ಬಿಟ್ಟು ಕದಲಲಿಲ್ಲ. ಖಾಸಗಿ ಬ್ಯಾಂಕುಗಳು ಕಾರ್ಯ ನಿರ್ವಹಿಸಿದವಾದರೂ ಗ್ರಾಹಕರ ಸಂಖ್ಯೆ ವಿರಳವಾಗಿತ್ತು. ಮಂಡಿಪೇಟೆ, ಗಡಿಯಾರ ಕಂಬ, ಕಾಳಿಕಾದೇವಿ ರಸ್ತೆ, ಅಶೋಕ ರಸ್ತೆ, ಎವಿಕೆ ರಸ್ತೆಗಳು ಬಿಕೋ ಎನ್ನುತ್ತಿದ್ದವು. ಕಿರಾಣಿ ಅಂಗಡಿ, ಹಾಲು, ತರಕಾರಿ ಅಂಗಡಿಗಳು, ಮೆಡಿಕಲ್ ಶಾಪ್‌ಗಳ, ಪೆಟ್ರೋಲ್ ಬಂಕ್‌ಗಳ ಸೇವೆ ಎಂದಿನಂತಿತ್ತು.

ಖಾಸಗಿ ಬಸ್‌ಗಳ ಸಂಚಾರ ಸ್ಥಗಿತವಾಗಿತ್ತು. ಸರ್ಕಾರಿ ಬಸ್ಸುಗಳು ಸಂಚರಿಸುತ್ತಿದ್ದವು. ಆದರೆ ಪ್ರಯಾಣಿಕರಿರಲಿಲ್ಲ. ಖಾಸಗಿ ಹಾಗೂ ಸರ್ಕಾರ ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರಿಗಿಂತ ಬಸ್‌ಗಳ ಸಂಖ್ಯೆಯೇ ಹೆಚ್ಚಾಗಿತ್ತು. ರೈಲ್ವೇ ನಿಲ್ದಾಣದಲ್ಲೂ ಜನ ವಿರಳವಾಗಿತ್ತು. ರೈಲು ಹಾಗೂ ಬಸ್ ನಿಲ್ದಾಣಗಳು ಸೇರಿದಂತೆ ಅಲ್ಲಲ್ಲಿ ಆಟೋಗಳು ಕಂಡು ಬರುತ್ತಿದ್ದವು.

ಹೋಟೆಲ್‌ಗಳು ತೆರೆದು ಪಾರ್ಸೆಲ್ ಸೇವೆ ನೀಡಿದವು. ಪಾರ್ಸೆಲ್ ತೆಗೆದುಕೊಂಡು ಹೋಗ ಲು ಸಾಧ್ಯವಾಗದ ಕಾರ್ಮಿಕರು, ವಿದ್ಯಾರ್ಥಿಗಳು ಅನಿವಾರ್ಯವಾಗಿ ಹೋಟೆಲ್‌ಗಳ ಸನಿಹ ದೂರ ದಲ್ಲೇ ನಿಂತು ಉಪಹಾರ, ಊಟ ಸೇವಿಸುತ್ತಿದ್ದರು.

**ದರ್ಶನ ನೀಡದ ದೇವರು:** ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನ ಸೇರಿದಂತೆ ಹಲವಾರು ದೇವಾಲಯಗಳಲ್ಲಿ ಭಕ್ತರ ಪ್ರವೇಶ ನಿಷೇಧಿಸಲಾಗಿತ್ತು. ಆದರೆ (2ನೇ ಪುಟಕ್ಕೆ)

### ಮಾಸ್ಕ್ ಧರಿಸಲು ನಿರ್ಲಕ್ಷ್ಯ

**ವಾರಾಂತ್ಯದ ಕರ್ಫ್ಯೂಗೆ ಉತ್ತಮ ಸ್ಪಂದನೆ ನೀಡಿದ ಜನತೆ ಮಾಸ್ಕ್ ಧರಿಸುವಲ್ಲಿ ಮಾತ್ರ ನಿರ್ಲಕ್ಷ್ಯ ತೋರುತ್ತಿದ್ದುದು ಕಂಡು ಬಂತು. ನಗರದಲ್ಲಿ ಸಂಚರಿಸುತ್ತಿದ್ದ ವಾಹನ ಸವಾರರು, ಬಸ್ ಪ್ರಯಾಣಿಕರು, ಆಟೋಗಳ ಚಾಲಕರು ಹಾಗೂ ಪ್ರಯಾಣಿಕರಲ್ಲಿ ಬೆರಳೆಣಿಕೆಯಷ್ಟು ಜನರು ಮಾತ್ರ ಮಾಸ್ಕ್ ಧರಿಸುತ್ತಿದ್ದುದು ಬಿಟ್ಟರೆ ಉಳಿದವರ ಮಾಸ್ಕ್‌ಗಳು ಜೇಬಿನಲ್ಲಿ ಅಥವಾ ವ್ಯಾನಿಟಿ ಬ್ಯಾಗ್‌ನಲ್ಲಿ ಬೆಚ್ಚಗಿರುತ್ತಿದ್ದವು. ಇತ್ತ ಬೆಳಿಗ್ಗೆ ತರಕಾರಿ ಮಾರುಕಟ್ಟೆಯೂ ಸೇರಿದಂತೆ ರೀಟೆಲ್ ವ್ಯಾಪಾರಿಗಳು, ಹಣ್ಣು ವ್ಯಾಪಾರಿಗಳು ಹಾಗೂ ಗ್ರಾಹಕರು ಮಾಸ್ಕ್ ಧರಿಸುತ್ತಿರಲಿಲ್ಲ. ಕೆಲವರ ಮಾಸ್ಕ್ ಕುತ್ತಿಗೆ ಮೇಲಿರುತ್ತಿದ್ದವು.**



ಬೆಳಿಗ್ಗೆ ಜನರಿಂದ ತುಂಬಿಕೊಂಡು ಹೋಳುಮಗ್ಗುಲಲ್ಲಿ ಓಡಾಡಬೇಕಾಗಿದ್ದ ಹೋಲ್‌ಸೇಲ್ ತರಕಾರಿ ಮಾರುಕಟ್ಟೆಯಲ್ಲಿ ವ್ಯಾಪಾರಿಗಳನ್ನು ಬಿಟ್ಟರೆ ಗ್ರಾಹಕರು ಕೆಲವೇ ಜನರಿದ್ದರು.



ಖಾಲಿ ಖಾಲಿಯಾಗಿದ್ದ ಎವಿಕೆ ಕಾಲೇಜು ರಸ್ತೆ

## ಕರ್ಫ್ಯೂಗೆ ಹರಿಹರ ನಗರ ಸ್ತಬ್ಧ

ಹರಿಹರ, ಜ. 8 - ರಾಜ್ಯ ಸರ್ಕಾರವು ಕೊರೊನಾ ತಡೆಗಟ್ಟಲು ವಾರಾಂತ್ಯದ ಕರ್ಫ್ಯೂ ಜಾರಿಗೊಳಿಸಿದ ಹಿನ್ನೆಲೆಯಲ್ಲಿ ನಗರದಲ್ಲಿ ಅಗತ್ಯ ವಸ್ತುಗಳ ಅಂಗಡಿಗಳನ್ನು ಬಿಟ್ಟರೆ ಉಳಿದ ಎಲ್ಲಾ ರೀತಿಯ ಅಂಗಡಿ - ಮುಂಗಟ್ಟುಗಳು ತಮ್ಮ ವ್ಯಾಪಾರ ವಹಿವಾಟನ್ನು ಸ್ಥಗಿತಗೊಳಿಸಿದ್ದವು. ಬಸ್, ಆಟೋ ಸಂಚಾರ ಎಂದಿನಂತೆ ಇದ್ದರೂ ಸಹ ಪ್ರಯಾಣಿಕರ ಸಂಖ್ಯೆ ವಿರಳವಾಗಿತ್ತು.

**ಸಂಚಾರ ವಿರಳ, ಅಗತ್ಯ ವಸ್ತುಗಳ ವ್ಯಾಪಾರವೂ ಕಡಿಮೆ**

ಸಾರ್ವಜನಿಕರಿಗೆ ಅಗತ್ಯವಾಗಿ ಬೇಕಾಗುವ ಹಾಲು, ಹಣ್ಣು, ಹೂವು, ಔಷಧಿ, ತರಕಾರಿ , ರಸಗೊಬ್ಬರ, ಮಟನ್ ಸೇರಿದಂತೆ ಅಗತ್ಯವಾದ ವಸ್ತುಗಳ ಅಂಗಡಿಗಳು ಎಂದಿನಂತೆ ತೆರೆದುಕೊಂಡು ವ್ಯಾಪಾರ, ವಹಿವಾಟು ನಡೆಸಿದವು.

ರಾಜ್ಯದ ಹೃದಯ ಭಾಗದಲ್ಲಿರುವ ನಗರಕ್ಕೆ ಪ್ರತಿನಿತ್ಯವೂ ಸಾವಿರಾರು ಸಂಖ್ಯೆಯಲ್ಲಿ ಬಸ್‌ಗಳು ಬರುತ್ತವೆ. ಶನಿವಾರ ಬಸ್ ಸಂಚಾರ (2ನೇ ಪುಟಕ್ಕೆ)

## ಜಗಳೂರಲ್ಲಿ ಪೂರ್ಣ ಸಹಕಾರ

ಜಗಳೂರು, ಜ.8- ತಾಲ್ಲೂಕಿನಲ್ಲಿ ವಾರಾಂತ್ಯದ ಕರ್ಫ್ಯೂಗೆ ಸಾರ್ವಜನಿಕರಿಂದ ಸಂಪೂರ್ಣ ಸಹಕಾರ ವ್ಯಕ್ತವಾಗಿದೆ. ಕರ್ಫ್ಯೂ ವೇಳೆ ಅಗತ್ಯ ಸೇವೆಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿತ್ತು. ಆಸ್ಪತ್ರೆ, ಔಷಧಿ, ಹಾಲು, ದಿನಸಿ ಅಂಗಡಿ, ಬೀದಿಬದಿ ಹಣ್ಣು, ತರಕಾರಿ ಅಂಗಡಿಗಳು ಮಾತ್ರ ಎಂದಿನಂತೆ ತೆರೆದಿದ್ದವು.

ಶಾಲಾ-ಕಾಲೇಜುಗಳಿಗೆ ರಜೆ ಇದ್ದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಕಲರವ ಇಲ್ಲದೆ ಗ್ರಾಮೀಣ ಭಾಗ ಸೇರಿದಂತೆ ಪಟ್ಟಣ ಬಿಕೋ ಎನ್ನುತ್ತಿತ್ತು. ಕರ್ಫ್ಯೂ ವಿಷಯ ತಿಳಿದ ಸಾರ್ವಜನಿಕರು, ರೈತರು ಪಟ್ಟಣಕ್ಕೆ ಆಗಮಿಸದ ಕಾರಣ ಜನದಟ್ಟಣೆಯಿಲ್ಲದೆ ಅಗತ್ಯ ವಸ್ತುಗಳ ಖರೀದಿಗೆ ಮಾತ್ರ ಅಲ್ಲಲ್ಲಿ ಜನ ಸಂಚಾರ ಕಂಡು ಬಂತು.

**ಅಂಗಡಿಗಳು ಬಂದ್-ಸಂಚಾರ ವಿರಳ:** ಪೆಟ್ರೋಲ್, ಡೀಸೆಲ್, ದಿನಸಿ ಔಷಧಿ, ಹೋಟೆಲ್, ಅಗತ್ಯ ವಸ್ತುಗಳ ವ್ಯಾಪಾರ ಹೊರತು ಪಡಿಸಿದರೆ (2ನೇ ಪುಟಕ್ಕೆ)

### ಶನಿವಾರದ ಸಂತೆ ರದ್ದು

**ಪಟ್ಟಣದಲ್ಲಿ ಶನಿವಾರ ನಡೆಯಬೇಕಿದ್ದ ಸಂತೆ ಪೂರ್ವಯೋಜಿತವಾಗಿ ತಹಶೀಲ್ದಾರ್ ಅವರ ಸೂಚನೆಯಂತೆ ಆಟೋದಲ್ಲಿ ಜಾಗೃತಿ ಮೂಡಿಸಿದ ಪರಿಣಾಮ ಯಾರೊಬ್ಬ ವ್ಯಾಪಾರಸ್ಥರು ಸಂತೆ ಮೈದಾನಕ್ಕೆ ಆಗಮಿಸದೆ ಕರ್ಫ್ಯೂಗೆ ಬೆಂಬಲಿಸಿದರು. ಸಾರ್ವಜನಿಕರು ಕೂಡ ಆಗಮಿಸದೆ ಶನಿವಾರ ಸಂತೆ ರದ್ದಾದ ಕಾರಣ ಅಲ್ಲಲ್ಲಿ ತರಕಾರಿ ಗಾಡಿಗಳಲ್ಲಿ ಖರೀದಿಗೆ ಮುಂದಾದರು.**

## ಕೊಟ್ಟೂರು ತರಳಬಾಳು ಹುಣ್ಣಿಮೆ ಮುಂದೂಡಿಕೆ



ಸಿರಿಗೆರೆ, ಜ.8 ಬಳ್ಳಾರಿ ಜಿಲ್ಲೆಯ ಕೊಟ್ಟೂರು ಪಟ್ಟಣದಲ್ಲಿ ಫೆಬ್ರವರಿ 19ರಿಂದ 27ರವರೆಗೆ ನಡೆಯಬೇಕಿದ್ದ ತರಳಬಾಳು ಹುಣ್ಣಿಮೆ ಮಹೋತ್ಸವ ವನ್ನು ಒಂದು ವರ್ಷ ಮುಂದೂಡ ಲಾಗಿದೆ ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ. ದೇಶದ ಎಲ್ಲೆಡೆ ಕೋವಿಡ್ ಪ್ರಭಾವ ಇರುವು ದರಿಂದ ಈ ಕ್ರಮ ಅಗತ್ಯವಾಗಿದೆ. 9 ದಿನಗಳ ಕಾಲ ನಡೆಯುವ ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ನಿತ್ಯವೂ ಸಾವಿರಾರು ಜನರು ಭಾಗಿಯಾಗುತ್ತಿದ್ದರು. ಕೋವಿಡ್‌ನಿಂದಾಗಿ ಭಕ್ತರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗಬಾರದು ಎಂದು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಶ್ರೀಗಳು ತಿಳಿಸಿದ್ದಾರೆ.

## ಫೆ.10ರಿಂದ ಪಂಚ ರಾಜ್ಯಗಳ ಚುನಾವಣೆ

**ಉತ್ತರ ಪ್ರದೇಶ, ಉತ್ತರಾಖಂಡ, ಪಂಜಾಬ್, ಮಣಿಪುರ ಹಾಗೂ ಗೋವಾ ವಿಧಾನಸಭೆಗಳಿಗೆ ಫೆ.10 ರಿಂದ ಮಾ.7ರ ನಡುವೆ ಚುನಾವಣೆ, ಮಾ.10ರಂದು ಫಲಿತಾಂಶ**

ನವದೆಹಲಿ, ಜ. 8 – ಉತ್ತರ ಪ್ರದೇಶ, ಉತ್ತರಾಖಂಡ, ಪಂಜಾಬ್, ಮಣಿಪುರ ಹಾಗೂ ಗೋವಾ ವಿಧಾನಸಭೆಗಳಿಗೆ ಫೆಬ್ರವರಿ 10ರಿಂದ ಮಾರ್ಚ್ 7ರ ನಡುವೆ ಚುನಾವಣೆ ನಡೆಯಲಿದ್ದು, ಮಾರ್ಚ್ 10ರಂದು ಮತ ಎಣಿಕೆ ನಡೆಯಲಿದೆ ಎಂದು ಚುನಾವಣಾ ಆಯೋಗ ಪ್ರಕಟಿಸಿದೆ.

ಐದು ರಾಜ್ಯಗಳ ಪೈಕಿ ನಾಲ್ಕರಲ್ಲಿ ಬಿಜೆಪಿ ಈಗ ಅಧಿಕಾರದಲ್ಲಿದೆ. ಪಂಜಾಬ್‌ನಲ್ಲಿ ಕಾಂಗ್ರೆಸ್ ಅಧಿಕಾರ ಹೊಂದಿದೆ.

ಚುನಾವಣಾ ವೇಳಾಪಟ್ಟಿ ಪ್ರಕಟಿಸಿರುವ ಮುಖ್ಯ ಚುನಾವಣಾ ಆಯುಕ್ತ ಸುಶೀಲ್ ಚಂದ್ರ, ಜನವರಿ 15ರವರೆಗೆ ಎಲ್ಲ ರೀತಿಯ ರಾಜಕೀಯ ಸಮಾವೇಶ, ಪಾದಯಾತ್ರೆ, ಇತ್ಯಾದಿಗಳ ಮೇಲೆ ನಿಷೇಧ ಹೇರಿದ್ದಾರೆ.

ಫೆಬ್ರವರಿಯಲ್ಲಿ ಕೊರೊನಾದ ಮೂರನೇ ಅಲೆ ಅತಿ ಹೆಚ್ಚಿನ ಮಟ್ಟಕ್ಕೆ ತಲುಪಲಿದೆ ಎಂದು ಪರಿಣಿತರು ಅಂದಾಜಿಸಿದ್ದರ ನಡುವೆಯೇ ಚುನಾವಣೆಗಳನ್ನು ಘೋಷಿಸಲಾಗಿದೆ.

ಈ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿರುವ ಸುಶೀಲ್‌ಚಂದ್ರ, ಪರಿಸ್ಥಿತಿ ಬದಲಾವಣೆಗಳಿಂದ ಕೂಡಿರುತ್ತದೆ. ಯಾರೂ ಭವಿಷ್ಯದ ಕೊರೊನಾ ಸಂಖ್ಯೆಯನ್ನು ನಿಖರವಾಗಿ ಅಂದಾಜಿಸ ಲಾಗದು ಎಂದಿದ್ದಾರೆ.

ಕೊರೊನಾದಿಂದ ಸುರಕ್ಷಿತವಾಗಿರುವ ರೀತಿಯಲ್ಲಿ ಚುನಾವಣೆಗಳನ್ನು ನಡೆಸಲಾಗುವುದು. ಚುನಾವಣಾ ಸಿಬ್ಬಂದಿಗೆ ಲಸಿಕೆ ನೀಡ ಲಾಗುವುದು ಹಾಗೂ ಮತಗಟ್ಟೆಗಳನ್ನು ಸ್ಯಾನಿಟೈಸ್ ಮಾಡಲಾಗುವುದು ಎಂದವರು ಹೇಳಿದ್ದಾರೆ.

ಉತ್ತರ ಪ್ರದೇಶ ವಿಧಾನಸಭೆಗೆ ಏಳು ಹಂತಗಳಲ್ಲಿ ಚುನಾವಣೆ ನಡೆಯಲಿದೆ. ಮಣಿಪುರ ವಿಧಾನಸಭೆಗೆ ಎರಡು ಹಂತ ಹಾಗೂ ಉಳಿದೆಡೆ ಒಂದೇ ಹಂತಗಳಲ್ಲಿ ಚುನಾ ವಣೆ ನಡೆಯಲಿದೆ. ಒಟ್ಟು 690 ವಿಧಾನಸಭಾ ಕ್ಷೇತ್ರಗಳಲ್ಲಿ ಚುನಾವಣೆ (2ನೇ ಪುಟಕ್ಕೆ)

## ರಾಜ್ಯ ಸ್ತಬ್ಧ, ಜನಜೀವನ ಅಸ್ತವ್ಯಸ್ತ

### ಸರ್ಕಾರದ ವಾರಾಂತ್ಯದ ಕರ್ಫ್ಯೂ ನಿರ್ಧಾರಕ್ಕೆ ಜನತೆಯ ಸ್ಪಂದನೆ

ಬೆಂಗಳೂರು, ಜ. 8 - ಕೊರೊನಾ ನಿಯಂತ್ರಣಕ್ಕಾಗಿ ರಾಜ್ಯಾದ್ಯಂತ ರಾತ್ರಿ ಕರ್ಫ್ಯೂ ಮತ್ತು ವಾರಾಂತ್ಯದ ಕರ್ಫ್ಯೂ ಜಾರಿಗೊಳಿಸಿದ ಹಿನ್ನೆಲೆಯಲ್ಲಿ ಇಡೀ ರಾಜ್ಯ ಸ್ತಬ್ದಗೊಂಡು ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿತು.

ಜನವರಿ 15 ರವರೆಗೂ ವಾರಾಂತ್ಯದ ಕರ್ಫ್ಯೂ ಮತ್ತು ರಾತ್ರಿ ಕರ್ಫ್ಯೂ ಅನ್ನು ಸರ್ಕಾರ ಜಾರಿಗೆ ತಂದಿದೆ. ಕೊರೊನಾ ಸೋಂಕು ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದ್ದು, ಸಾರ್ವಜನಿಕರು ಸರ್ಕಾರದ ನಿರ್ಧಾರಕ್ಕೆ ಸ್ಪಂದಿಸಿದ್ದಾರೆ.

ಸೋಂಕು ಹೆಚ್ಚಾಗುತ್ತಿದ್ದಂತೆ ಜನರು ಭಯಭೀತಿಗೊಳಗಾಗಿ ಮುನ್ನೆಚ್ಚರಿಕೆಗೂ ಮುಂದಾಗಿದ್ದಾರೆ. ಕೈಗಾರಿಕೆಗಳು ಹೊರತುಪಡಿಸಿ, ಉಳಿದೆಲ್ಲವೂ ಬಂದ್ ಆಗಿತ್ತು. ಅನಗತ್ಯವಾಗಿ ರಸ್ತೆಗಿಳಿದ ನಾಗರಿಕರ ಮೇಲೆ ಪೊಲೀಸ್ ದಂಡ ವಿಧಿಸಿದ್ದಾರೆ.

ಕಳೆದ ಲಾಕ್‌ಡೌನ್ ಸಂದರ್ಭದಲ್ಲಿ ಲಾಠಿ ಬೀಸುತ್ತಿದ್ದ ಪೊಲೀಸರು, ಈಗ ದಂಡ ಮಾತ್ರ ವಿಧಿಸುತ್ತಿದ್ದಾರೆ.

ರಾಜ್ಯದ ಪ್ರಮುಖ ರಸ್ತೆಗಳನ್ನು ಬಂದ್ ಮಾಡಲಾಗಿದೆ. ಸಾರ್ವಜನಿಕ ಸೇವೆ ವಾಹನಗಳು, ರಾಜ್ಯ ರಸ್ತೆ ಸಾರಿಗೆ ಬಸ್‌ಗಳಿಗೆ, ಅತ್ಯವಶ್ಯವಾಗಿ ಪ್ರಯಾಣಿಸುವಂತಹವರ ವಾಹನಗಳಿಗೆ ಅನುವು ಮಾಡಿಕೊಡಲಾಗಿದೆ.

ರಾಜ್ಯ ರಸ್ತೆ ಸಾರಿಗೆ ಬಸ್‌ಗಳನ್ನು ಬೀದಿಗೆ ಬಿಟ್ಟಿದ್ದರೂ, ಪ್ರಯಾಣಿಕರು ಇಲ್ಲದೆ, ಸಂಸ್ಥೆಯ ಅಧಿಕಾರಿಗಳು ಕೆಲವು ಮಾರ್ಗಗಳನ್ನು ರದ್ದುಪಡಿಸಿದರು.

ರೈಲು ಮತ್ತು ವಿಮಾನ ಸಂಚಾರ ಎಂದಿನಂತೆ ಇದೆ. ಟ್ಯಾಕ್ಸಿ ಮತ್ತು ಆಟೋ (2ನೇ ಪುಟಕ್ಕೆ)

## ವಾಲ್ಮೀಕಿ ಜಾತ್ರೆ ವೇಳೆಗೆ ಮೀಸಲಾತಿ ಹೆಚ್ಚಿಸದಿದ್ದರೆ ಹೋರಾಟಕ್ಕೆ ಅಂತಿಮ ರೂಪ

### ರಾಜ್ಯ ಸರ್ಕಾರಕ್ಕೆ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅಂತಿಮ ಸಂದೇಶ



ಮಲೇಬೆನ್ನೂರು, ಜ.8- ಎಸ್ಟಿ ಮೀಸಲಾತಿಯನ್ನು ಜನಸಂಖ್ಯೆಗೆ ಅನುಗುಣವಾಗಿ ಶೇ.3 ರಿಂದ ಶೇ. 7.5ಕ್ಕೆ ಹೆಚ್ಚಿಸಬೇಕೆಂಬ ನಮ್ಮ ಹೋರಾಟ ಬರುವ ಫೆಬ್ರವರಿ 8 ಮತ್ತು 9 ರಂದು ಜರುಗುವ ವಾಲ್ಮೀಕಿ ಜಾತ್ರೆಯಲ್ಲಿ ಅಂತಿಮ ರೂಪ ಪಡೆಯಲಿದೆ ಎಂದು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ರಾಜ್ಯ ಸರ್ಕಾರಕ್ಕೆ ಅಂತಿಮ ಸಂದೇಶ ನೀಡಿದರು.

4ನೇ ವರ್ಷದ ವಾಲ್ಮೀಕಿ ಜಾತ್ರೆ ಸಂಬಂಧ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಇಂದು ಏರ್ಪಾಡಾಗಿದ್ದ 4ನೇ ಪೂರ್ವ ಭಾವಿ ಸಭೆಗೂ ಮುನ್ನ ಪತ್ರಕರ್ತರೊಂದಿಗೆ ಶ್ರೀಗಳು ಮಾತನಾಡಿದರು.

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಎಸ್ಟಿ ಮೀಸಲಾತಿ ಹೆಚ್ಚಿಸುತ್ತೇವೆ ಮತ್ತು ಶ್ರೀರಾಮುಲು ಅವರನ್ನು ಡಿಸಿಎಂ ಮಾಡುತ್ತೇವೆಂದು ಭರವಸೆ ನೀಡಿ, ಸಮಾಜದ ಸಾಕಷ್ಟು ಮತ ಪಡೆದ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಕೊಟ್ಟ ಮಾತನ್ನು ಈಡೇರಿಸದೇ ಉನ್ನತ ಸಮಿತಿ ಹೆಸರಿನಲ್ಲಿ ಕಾಲಹರಣ ಮಾಡುತ್ತಿದೆ ಎಂದು ಸ್ವಾಮೀಜಿ ದೂರಿದರು.

ರಾಜ್ಯದಲ್ಲಿ ನಕಲಿ ಜಾತಿ ಪ್ರಮಾಣ ಪತ್ರದ ಹಾವಳಿ ಹೆಚ್ಚಾಗಿದ್ದು, ತಡೆಗಟ್ಟಲು ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರೂ ಸರ್ಕಾರ ಸ್ಪಂದಿಸುತ್ತಿಲ್ಲ. ಹೊಸದಾಗಿ ಘೋಷಣೆ ಮಾಡಿರುವ ಎಸ್ಟಿ ಸಚಿವಾಲಯ ಸಮರ್ಪಕವಾಗಿ ಕಾರ್ಯ ರೂಪಕ್ಕೆ ಬಂದಿಲ್ಲ. ಎಸ್ಟಿ ನಿಗಮಕ್ಕೆ ಜನಸಂಖ್ಯೆಗೆ ಅನುಗುಣವಾಗಿ ಅನುದಾನ ನೀಡುತ್ತಿಲ್ಲ ಎಂಬ ಅಸಮಾಧಾನವನ್ನು ಶ್ರೀಗಳು ವ್ಯಕ್ತಪಡಿಸಿದರು.

ಸಚಿವ ಆನಂದ್ ಸಿಂಗ್ ಅವರು ತಮ್ಮ ಸ್ವಂತ ಹಣದಲ್ಲಿ ನಿರ್ಮಿಸಿರುವ ನೂತನ ರಥವೂ ಈ ಜಾತ್ರೆಯಲ್ಲಿ ಲೋಕಾರ್ಪಣೆಗೊಳ್ಳಲಿದೆ.

4ನೇ ವರ್ಷದ ವಾಲ್ಮೀಕಿ ಜಾತ್ರಾ ಸಮಿತಿಯ ಅಧ್ಯಕ್ಷರೂ ಆದ ಚಳ್ಳಕೆರೆ ಶಾಸಕ ಟಿ. ರಘುಮೂರ್ತಿ ಮಾತನಾಡಿ, ಮೀಸಲಾತಿ ಹೆಚ್ಚಳ ಕಾನೂನು ಬದ್ಧವಾದ ಬೇಡಿಕೆಯಾಗಿದ್ದು, ಅದನ್ನು ಪಡೆದುಕೊಳ್ಳುವುದು (4ನೇ ಪುಟಕ್ಕೆ)

## ಜಿಲ್ಲೆಯಲ್ಲಿ 12 ಪಾಸಿಟಿವ್

ದಾವಣಗೆರೆ, ಜ.8- ಜಿಲ್ಲೆಯಲ್ಲಿ ಶನಿವಾರ 12 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟ ಬಗ್ಗೆ ವರದಿಯಾಗಿದೆ. ಮೂವರು ಗುಣಮುಖರಾಗಿದ್ದಾರೆ. ದಾವಣಗೆರೆ ತಾಲ್ಲೂಕಿನಲ್ಲಿ 8, ಹರಿಹರ 1, ಜಗಳೂರು 2 ಹಾಗೂ ಚನ್ನಗಿರಿ ತಾಲ್ಲೂಕಿನ ಒಬ್ಬರಲ್ಲಿ ಸೋಂಕು ಕಂಡು ಬಂದಿದೆ. ಒಟ್ಟು 48 ಸಕ್ರಿಯ ಪ್ರಕರಣಗಳವೆ.

## ಅಭಿವೃದ್ಧಿ ಪಡಿಸಿದ ರೈಲ್ವೆ ನಿಲ್ದಾಣಗಳಿಗೆ ಶುಲ್ಕ

ನವದೆಹಲಿ, ಜ. 8 – ಮರು ಅಭಿವೃದ್ಧಿಪಡಿಸಿರುವ ರೈಲ್ವೆ ನಿಲ್ದಾಣಗಳಲ್ಲಿ ಹತ್ತುವ ಇಲ್ಲವೇ ಇಳಿಯುವ ದೂರ ಪ್ರಯಾಣದ ರೈಲುಗಳ ಪ್ರಯಾಣಿಕರಿಗೆ ಹತ್ತು ರೂ.ಗಳಿಂದ 50 ರೂ.ಗಳ ಶುಲ್ಕ ವಿಧಿಸಲು ನಿರ್ಧರಿಸಲಾಗಿದೆ.

ಟಿಕೆಟ್ ಕಾಯ್ದಿರಿಸುವ ವೇಳೆ ಹೆಚ್ಚುವರಿ ಶುಲ್ಕ ಪಡೆಯಲಾಗುವುದು. ಮರು ಅಭಿವೃದ್ಧಿ ಪಡಿಸಿರುವ (2ನೇ ಪುಟಕ್ಕೆ)

## ಪ್ರಭಾರ ಐಜಿಪಿಯಾಗಿ ಸತೀಶ್ ಕುಮಾರ್



ದಾವಣಗೆರೆ, ಜ.8- ಬೆಳಗಾವಿಯ ಉತ್ತರ ವಲಯ ಐಜಿಪಿ ಎನ್. ಸತೀಶ್ ಕುಮಾರ್ ಅವರನ್ನು ಪೂರ್ವ ವಲಯದ ಹೆಚ್ಚುವರಿ ಪ್ರಭಾರ ಐಜಿಪಿಯನ್ನಾಗಿ ಸರ್ಕಾರ ನೇಮಕ ಮಾಡಿದೆ.

ಇದೇ ದಿನಾಂಕ 3ರಂದು ಪೂರ್ವ ವಲಯದ ಹೆಚ್ಚುವರಿ ಪ್ರಭಾರ ಐಜಿಪಿ ಆಗಿ ಅಧಿಕಾರ (4ನೇ ಪುಟಕ್ಕೆ)




# ಕಾಲ ಚಕ್ರ...?



ಮಾವಾ ಹ್ಯಾಪಿ ನ್ಯೂ ಇಯರ್...! ಅದೇನೋ ಈ ಲಾಕ್ ಡೌನ್ ಅನೌನ್ಸ್ ಆದಾಗ ನೀವು ನೆನಪಾಗ್ತೀರಿ...!

**ಹೌದು ತಮ್ಮಾ, ಕೆಲವು ಸಾರಿ ಕಾಲ ಗತಕಾಲವನ್ನು ನೆನಪಿಸಿಕೊಳ್ತಾ ಇರ್ತತಿ...**

ಕಾಲ ಅಂದಾಕ್ಷಣ ನೆನಪಾಯ್ತು. ಈ ಮಳೆಗಾಲ, ಬೇಸಿಗೆ ಕಾಲ, ಚಳಿಗಾಲ ಅವುಗಳ ಕ್ಯಾಲೆಂಡರ್ ಬದಲಾಗಿದೆ ಅನಿಸಲ್ವಾ..?

**ಹೌದಪಾ... ಮೊದಲು ಇವು ವರ್ಷಕ್ಕೆ ನಾಲ್ಕು ತಿಂಗಳು ಇಂತಿಂತಹ ಸಮಯಕ್ಕೆ ಬರ್ತಿದ್ವು. ಆದರೆ ನಮ್ಮ ಕಲಾ ಮಂಜಣ್ಣ ಹೇಳಿದಂಗೆ ಇತ್ತೀಚಿಗೆ ಒಮ್ಮೊಮ್ಮೆ ಒಂದೇ ದಿನಕ್ಕೆ ಎಂಟೆಂಟು ತಾಸು ಬಂದು ಹೋಗ್ತಾವೆ. ಬೆಳಿಗ್ಗೆಯಿಂದ ಮಧ್ಯಾಹ್ನ ಬೇಸಿಗೆ ಕಾಲ, ಸಂಜೆ ಚಳಿಗಾಲ, ರಾತ್ರಿ ಮಳೆಗಾಲ! ಈಗ ಹೊಸದಾಗಿ ವರ್ಷಕ್ಕೆ ಒಂದು ಬಾರಿ ಬಂದು ಹೋಗೋ ಕಾಲ ಒಂದು ಶುರು ಆಗೇತಿ.**


ಯಾವುದು...?

**ಲಾಕ್ ಡೌನ್ ಕಾಲ..!**

ಸರಿಯಾಗಿ ಹೇಳಿದ್ರಿ. ಅಲ್ಲಾ ವರ್ಷಕ್ಕೆ ಒಂದೊಂದು ಹೊಸ ವೆರೈಟಿ ಕೊರೊನಾ ಬರ್ತಿದ್ರೆ ಮುಂದೆ ಹೆಂಗೆ ಅಂತಾ?

**ಈ ಆಡಳಿತ ಪಕ್ಷದೋರು ಮತಾಂತರ ನಿಷೇಧ ಮಾಡ್ತೀವಿ ಅಂತ ಹೇಳ್ತಾರೆ. ವಿರೋಧ ಪಕ್ಷದೋರು ಮಾಡಬೇಡ್ರಿ ಅಂತಾ ಪ್ರತಿಭಟನೆ ಮಾಡ್ತಾರೆ. ಈ ಮತಾಂತರ ಗದ್ದಲದ ಮಧ್ಯೆ ಈ ಅಂತರ ಎಲ್ಲರಿಗೂ ಗಂಡಾಂತರ ತರ್ತಿದೆ. ಅದರ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ತಾ ಇಲ್ಲ.**

ಯಾವ ಅಂತರ..?




ಕೊರೊನಾ ರೂಪಾಂತರ!...

**ಅದು ನಿಜ. ಅಂದ ಹಾಗೆ ಈ ವೀಕ್ ಎಂಡ್ ಲಾಕ್ ಡೌನ್ ನಲ್ಲಿ ಕಾಲ ಹೇಗೆ ಕಳೆಯಬೇಕು ಗೊತ್ತಾಗ್ತ ಇಲ್ಲ. ಪಾರ್ಟಿ ಮಾಡೋಣ ಅಂದರೇ ಬಾರ್ ಎಲ್ಲಾ ಬಂದ್... ಎಣ್ಣೇನು ಸಿಗೋ ಹಾಗಿಲ್ಲ.**

**ಹೇ ಶುಕ್ರವಾರಾನೇ ಒಂದ್ಕಡೆ ಸ್ಟಾಕು ಮಾಡ್ಬೇಕು. ಅದಕ್ಕೇ ನಮ್ಮ ಎ ಟೀಮು ಮತ್ತು ಬಿ ಟೀಮು ಒಂದು ಪ್ಲಾನ್ ಮಾಡ್ಯಾರೆ...**

ಎ ಟೀಮು...!? ಬಿ ಟೀಮು...?!

**ಹೇ ಅರವತ್ತರ ಮ್ಯಾಲಿರೋ ಎಂಟು ಮಂದಿ. ಕಳೆದ ಮೂವತ್ತು ವರ್ಷಗಳಿಂದಾ ತಪ್ಪದೇ ಪ್ರತಿ ಶನಿವಾರ ಸಂಜೆ ಪಾರ್ಟಿ ಮಾಡೋ ಟೀಮು. ಇನ್ನು ನಲವತ್ತೈದರಿಂದ ಅರವತ್ತರವರೆಗಿನ ಎಂಟು ಜನರ ಟೀಮು. ಪ್ರತಿ ಭಾನವಾರ ಪಾರ್ಟಿ ಮಾಡ್ತಾರೆ.**

ಹೌದಾ...! ಅವರದ್ದು ಏನು ಪ್ಲಾನು?

**'ಎ' ಟೀಮಿನ ಮುತ್ತಣ್ಣ ಅವನ ಫ್ಯಾಮಿಲಿ ಜೊತೆಗೆ ಶುಕ್ರವಾರ ಬೆಳಿಗ್ಗೆ ಹಾಸನ ಮತ್ತು ಕೊಡಗು ಸುತ್ತಾಡಿಕೊಂಡು ಬರೋಕೆ ಹೋಗ್ಯಾನ. ಮನೆಯ ಬೀಗದ ಕೈ 'ಬಿ' ಟೀಮಿನ ಅವರ ತಮ್ಮನ ಕಡೆಗೆ ಐತಿ. ಮನೆ ಖಾಲಿ ಇರೋದರಿಂದ ಶನಿವಾರ ಸೇರೋ 'ಎ' ಟೀಮಿನೋರು ಕೆಳಗಿನ ಫ್ರಿಜ್ಜಿನಾಗೆ ಭಾನುವಾರ ಸೇರೋ 'ಬಿ'ಟೀಂ ಮಿನೋರು ಅಟ್ಟದ ಮೇಲೆ ಇರೋ ಫ್ರಿಜ್ಜಿನಾಗೆ ಶುಕ್ರವಾರ ಸಂಜೇನೇ ಸ್ಟಾಕ್ ಮಾಡಿದಾರೆ. ನಂತರ ಅವರವರ ಸರದಿ ಬಂದಾಗ ಸೇರಿಕೊಳ್ಳುತ್ತಾರೆ. ಹೆಂಗೈತಿ ಐಡಿಯಾ?**

ಹೇ ಭಾರಿ ಐತಿ...!? ಆದರೆ ಮುಂದಿನ ವೀಕೆಂಡು ಬಂದಾಗ ಏನು ಮಾಡ್ತಾರೆ?

**ಮತ್ತೆ ಯಾರ ಮನೆ ಖಾಲಿ ಇರ್ತತೋ ಅಲ್ಲಿ ಸೇರ್ಕೊಳ್ಳೋದು.**

ಖಾಲಿ ಇರಲಿಲ್ಲ ಅಂದರೇ...?

**ಅವರ ಸಂಬಂಧಿಕರ ಪೈಕಿ ಯಾರು ಎಣ್ಣೇ ಹೊಡಿಯೋಲ್ಲವೋ ಅವರ ಫ್ಯಾಮಿಲಿಗಳನ್ನ ದೂರದ ರೆಸಾರ್ಟುಗಳಿಗೆ ವೀಕೆಂಡ್ ಪ್ರವಾಸಕ್ಕೆ ಕಳಿಸೋದು..!**

ಓಹ್ ! ಮೈ ಗಾಡ್... !!

**ಅದನ್ನು ಈಗ ಬೇರೆ ರೀತಿಯಲ್ಲಿ ಹೇಳಬೇಕು.**

ಯಾವ ರೀತಿ...?!

**ಓ ಮೈ ಕ್ರಾನ್ ...!!!**

# ಪುನೀತ್‌ಗೆ ವಿನೂತನ ಸಮಾಜ ನಮನ



ದಾವಣಗೆರೆ, ಜ. 8- ನಗರದ ವಿನೂತನ ಸಮಾಜದ ಸಹೋದರಿಯರಿಂದ ಪುನೀತ್ ರಾಜಕುಮಾರ್ ಅವರಿಗೆ ಭಾವಪೂರ್ಣ ನಮನ ಅರ್ಪಿಸಲಾಯಿತು. ಸಹೋದರಿಯರಾದ ಚಂದ್ರಿಕಾ ಮಂಜುನಾಥ್, ಪ್ರೇಮ ಸೋಮಶೇಖರ್, ಸಾವಿತ್ರಿ ಗವಿಸಿದ್ದೇಶ್ವರ, ಶಶಿ ಪ್ರಕಾಶ್, ವಿಜಯ ಸಿ. ಅಕ್ಕಿ, ಚಂದ್ರಿಕ ಜಗನ್ನಾಥ್ ಉಪಸ್ಥಿತರಿದ್ದರು.

# ಮಾರ್ಗಸೂಚಿ ಪಾಲನೆ ಪೊಲೀಸರಿಂದ ಸೂಚನೆ



ಹರಿಹರ, ಜ. 8- ಕೊರೊನಾ ರೋಗವನ್ನು ನಿಯಂತ್ರಣಕ್ಕೆ ತರುವು ದಕ್ಕೆ ರಾಜ್ಯ ಸರ್ಕಾರ ಲಾಕ್‌ಡೌನ್ ಘೋಷಣೆ ಮಾಡಿದ್ದರಿಂದ, ಸರ್ಕಾರದ ಮಾರ್ಗಸೂಚಿಗಳನ್ನು ಸಾರ್ವಜನಿಕರು ಚಾಚೂ ತಪ್ಪದೆ ಪಾಲನೆ ಮಾಡುವಂತೆ ನಗರಸಭೆಯ ಕಸದ ವಾಹನದಲ್ಲಿ ಪೊಲೀಸ್ ಸಿಬ್ಬಂದಿ ವಿಠಲ ಅವರು ಪ್ರಚಾರ ಮಾಡಿದರು. ಈ ಸಂದರ್ಭದಲ್ಲಿ ನಗರಸಭೆ ಸಿಬ್ಬಂದಿ ರಾಘವೇಂದ್ರ ಹಾಜರಿದ್ದರು.

# ನಗರದಲ್ಲಿ ಆಧುನಿಕ ಹೈನುಗಾರಿಕೆ ತರಬೇತಿ

ದಾವಣಗೆರೆ, ಜ.8 - ಆಧುನಿಕ ಹೈನುಗಾರಿಕೆ ಕುರಿತು ತರಬೇತಿಯು ಇದೇ ದಿನಾಂಕ 20 ಮತ್ತು 21 ರಂದು ಪಶು ಆಸ್ಪತ್ರೆ ಆವರಣದಲ್ಲಿರುವ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 08192 - 233787.

# ಸ್ಥಾಯಿ ಸಮಿತಿ ಅಧ್ಯಕ್ಷರುಗಳ ವಾಹನ ಸೌಲಭ್ಯ ರದ್ದುಗೊಳಿಸಲು ಒತ್ತಾಯ



ದಾವಣಗೆರೆ, ಜ.8- ಮಹಾನಗರ ಪಾಲಿಕೆ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳು ಹಾಗೂ ವಿಪಕ್ಷ ನಾಯಕರಿಗೆ ನೀಡಿರುವ ವಾಹನ ಸೌಲಭ್ಯವನ್ನು ಹಿಂಪಡೆಯುವಂತೆ ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್ ಒತ್ತಾಯಿಸಿದ್ದಾರೆ.

ನಿನ್ನೆ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ಸ್ಪಷ್ಟ ಆದೇಶವಿದ್ದರೂ ಸಹ ಅದನ್ನು ಧಿಕ್ಕರಿಸಿ ಸಭೆಯಲ್ಲಿ ತೀರ್ಮಾನ ಕೈಗೊಂಡಿರುವುದು ಸರಿಯಲ್ಲ ಎಂದರು.

ಪ್ರತಿ ತಿಂಗಳು 1 ಕಾರಿಗೆ 30 ಸಾವಿರ ರೂ. ನಂತೆ 4 ಕಾರುಗಳ ಬಾಡಿಗೆ ಇನ್ನಿತರೆ ಖರ್ಚಿಗಾಗಿ 1.20 ಲಕ್ಷ ರೂ. ಗಳಾಗುತ್ತದೆ. ಕಳೆದ 8 ತಿಂಗಳಿನಿಂದ ಬಾಡಿಗೆ ನೀಡಲಾಗುತ್ತಿದ್ದು, ಒಟ್ಟು 8-10 ಲಕ್ಷ ರೂ. ಗಳನ್ನು ಪಾಲಿಕೆಯಿಂದ ವ್ಯಯಿಸ ಲಾಗಿದೆ. ಅದಕ್ಕಾಗಿ ಇದುವರೆಗೂ ಖರ್ಚು ಮಾಡಿರುವ ಹಣವನ್ನು ಆಯುಕ್ತರೇ ಭರಿಸಬೇಕು ಎಂದು ಆಗ್ರಹಿಸಿದರು.

ಬಿಬಿಎಂಪಿ ಹೊರತು ಪಡಿಸಿ, ರಾಜ್ಯದ ಪಾಲಿಕೆಗಳ ಮೇಯರ್ ಮತ್ತು ಉಪ ಮೇಯರ್ ಗೆ ಮಾತ್ರ ವಾಹನ ಸೌಲಭ್ಯ ಕಲ್ಪಿಸಲಾಗಿದ್ದು, ಉಳಿದಂತೆ ಯಾವ ಸ್ಥಾಯಿ ಸಮಿತಿ ಅಧ್ಯಕ್ಷರುಗಳಿಗೂ ವಾಹನ ನೀಡುವಂತಿಲ್ಲ ಎಂಬ ಸರ್ಕಾರದ ಆದೇಶವಿದ್ದರೂ ಅದನ್ನು ಉಲ್ಲಂಘಿಸಿ, ಸಾರ್ವಜನಿಕರ ಹಣವನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ದೂರಿದರು.

ಪಾಲಿಕೆ ಬಿಜೆಪಿ ಸದಸ್ಯರು ತಮಗೆ ಬೇಕಾದವರಿಗೆ ಕಸ ವಿಲೇವಾರಿ ಜವಾಬ್ದಾರಿ ವಹಿಸಿದ್ದು, ಇದುವರೆಗೂ ಪಾಲಿಕೆಗೆ ಯಾವುದೇ ಹಣ ಪಾವತಿಯಾಗಿಲ್ಲ. ಪಾಲಿಕೆ ವ್ಯಾಪ್ತಿಯ ವಾಣಿಜ್ಯ ಮಳಿಗೆಗಳಿಂದ ಇಂತಿಷ್ಟು ಹಣವನ್ನು ವಸೂಲಿ ಮಾಡುತ್ತಿದ್ದರೂ ಆಯುಕ್ತರಾಗಲೀ, ಮೇಯರ್ ಆಗಲೀ ಯಾವುದೇ ಕ್ರಮಕ್ಕೆ ಮುಂದಾಗಿಲ್ಲ ಎಂದರು.

ಕಲ್ಯಾಣ ಮಂಟಪಗಳಿಂದ ಪ್ರತಿ ತಿಂಗಳು 2 ಸಾವಿರ ವಸೂಲಿ ಮಾಡಲಾಗುತ್ತಿದೆ. ಕೂಡಲೇ ಖಾಸಗಿ ಏಜೆನ್ಸಿಯನ್ನು ರದ್ದುಗೊಳಿಸಬೇಕೆಂದು ಒತ್ತಾಯಿಸಿದರು.

**ನಾಯಿಗಳ ಸಂತಾನ ಹರಣ ಚಿಕಿತ್ಸೆಗಾಗಿ 23 ಲಕ್ಷ ರೂ. ವೆಚ್ಚ:** ಬೀದಿ ನಾಯಿಗಳ ಸಂತಾನ ಹರಣ ಚಿಕಿತ್ಸೆಗಾಗಿ ಪ್ರತಿ ನಾಯಿಗೆ 8 ರೂ. ಗಳಂತೆ ಇದುವರೆಗೆ ಒಟ್ಟು 23 ಲಕ್ಷ ರೂ.ಗಳನ್ನು ವ್ಯಯಿಸಲಾಗಿದೆ ಎಂದು ನಾಗರಾಜ್ ಮಾಹಿತಿ ನೀಡಿದರು.

ಬೀದಿ ನಾಯಿಗಳ ಸ್ಥಳಾಂತರಕ್ಕೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಬೇಕು. ಅಧಿಕ ಹಣ ವ್ಯಯಿಸುವುದನ್ನು ತಪ್ಪಿಸಿದಂತಾಗುತ್ತದೆ. ಶಾಶ್ವತ ಪರಿಹಾರಕ್ಕೆ ಆಯುಕ್ತರು ಮತ್ತು ಮೇಯರ್ ಚಿಂತನೆ ನಡೆಸುವಂತೆ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಪಾಲಿಕೆ ಕಾಂಗ್ರೆಸ್ ಸದಸ್ಯರುಗಳಾದ ಕೆ. ಚಮನ್ ಸಾಬ್, ಅಬ್ದುಲ್ ಲತೀಫ್, ಗಡಿಗುಡಾಳ್ ಮಂಜುನಾಥ್ ಉಪಸ್ಥಿತರಿದ್ದರು.



**ಜಿಲ್ಲೆಯಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅವರು ಜಿಲ್ಲಾ ಚಿಗಟೇರಿ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗೆ ಶನಿವಾರ ಸಂಜೆ ಭೇಟಿ ನೀಡಿ ಸಿದ್ಧತೆಗಳನ್ನು ಪರಿಶೀಲಿಸಿದರು. ಜಿಲ್ಲಾ ಸರ್ವೇಕ್ಷಣಾಧಿಕಾರಿ ರಾಘವನ್ ಸೇರಿದಂತೆ ಆರೋಗ್ಯ ಇಲಾಖೆಯ ಅಧಿಕಾರಿಗಳು ಈ ಸಂದರ್ಭದಲ್ಲಿದ್ದರು.**

# ಕೆ.ಟಿ. ಪುಷ್ಪರಾಜ್ ಜಿಲ್ಲಾ ಕುಂಬಾರ ಸಂಘದ ಅಧ್ಯಕ್ಷ



ದಾವಣಗೆರೆ, ಜ.8- ಜಿಲ್ಲಾ ಕುಂಬಾರರ ಸಂಘದ ಎಲ್ಲಾ ತಾಲ್ಲೂಕುಗಳ ನಿರ್ದೇಶಕರ ಸಭೆಯು ಕೆ.ಟಿ. ಪುಷ್ಪರಾಜ್ ಅಧ್ಯಕ್ಷತೆಯಲ್ಲಿ ಸಂಘದ ಕಛೇರಿಯಲ್ಲಿ ನಿನ್ನೆ ನಡೆಯಿತು.

ಸಭೆಯಲ್ಲಿ ಬಸವರಾಜ್ ಕುಂಚೂರು, ಡಾ. ಡಿ.ಎಸ್. ಹೇಮಂತ್, ನಿಟ್ಟೂರು ಏಕಾಂತಪ್ಪ ಅವರುಗಳನ್ನು ಗೌರವ ಅಧ್ಯಕ್ಷರುಗಳನ್ನಾಗಿ ಆಯ್ಕೆ ಮಾಡಲಾಯಿತು. ಕೆ.ಟಿ. ಪುಷ್ಪರಾಜ್ ಭಾನುವಳ್ಳಿ ಅವರನ್ನು ಅಧ್ಯಕ್ಷರನ್ನಾಗಿ, ಚನ್ನವೀರಪ್ಪ ಕುಂಚೂರು, ಗು. ಕುಮಾರಸ್ವಾಮಿ, ಟಿ. ಕರಿಬಸಪ್ಪ ಅವರುಗಳನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

ಖಜಾಂಚಿಯಾಗಿ ಜಿ. ತಿಪ್ಪೇಸ್ವಾಮಿ, ಸಹ ಕಾರ್ಯದರ್ಶಿಗಳಾಗಿ ಕೆ.ಹೆಚ್. ಸದಾಶಿವಪ್ಪ, ಹಾಲಿವಾಣ ಸಿದ್ದಪ್ಪ, ಸಂಘಟನಾ ಕಾರ್ಯದರ್ಶಿಗಳಾಗಿ ಷಣ್ಮುಖಪ್ಪ ಹೊನ್ನಾಳಿ, ಮಂಜುನಾಥ ಚಕ್ರಸಾಲಿ, ನಿರ್ದೇಶಕರುಗಳಾಗಿ ಡಿ. ಜಯ್ಯಪ್ಪ, ಬಸವರಾಜಪ್ಪ ಬಿಳಿಚೋಡು, ರುದ್ರಮುನಿ ಚನ್ನಗಿರಿ, ಚನ್ನೇಶಿ ಹೊಸಮನಿ ನ್ಯಾಮತಿ, ಗಣೇಶ್ ಕುಂಬಾರ್, ಶ್ಯಾಮಲ ನಾಗರಾಜ್ ಅವರುಗಳನ್ನು ಆಯ್ಕೆ ಮಾಡಲಾಯಿತು ಎಂದು ಜಿಲ್ಲಾ ಕುಂಬಾರರ ಸಂಘದ ಅಧ್ಯಕ್ಷ ಕೆ.ಟಿ. ಪುಷ್ಪರಾಜ್ ತಿಳಿಸಿದ್ದಾರೆ.

# 'ಲಾಕ್‌ಡೌನ್-3' ಕಿರುಚಿತ್ರಕ್ಕೆ ಕಲಾವಿದರ ಆಯ್ಕೆ

ದಾವಣಗೆರೆ, ಜ.8- ನಗರದ ವೈಷ್ಣವಿ ಎಂ. ಫಿಲ್ಮ್ ವತಿಯಿಂದ ಲಾಕ್‌ಡೌನ್-3 ಕಿರುಚಿತ್ರ ನಿರ್ಮಾಣ ಮಾಡಿ, ದಾವಣಗೆರೆ ಮತ್ತು ಹರಿಹರ ನಗರದಲ್ಲಿ ಪ್ರದರ್ಶಿಸಲಾಗುವುದು.

ಉಚಿತ ತರಬೇತಿಯೊಂದಿಗೆ ಪಾತ್ರ ನೀಡಲಾಗುವುದು. ಡ್ರಾಮಾ ಜ್ಯೂನಿಯರ್ಸ್, ಕಾಮಿಡಿ ಕಿಲಾಡಿಗಳು ಮುಂತಾದ ಟಿವಿ ರಿಯಾಲಿಟಿ ಶೋಗಳಲ್ಲಿ ಭಾಗವಹಿಸಲು ನಮ್ಮ ವೇದಿಕೆ ನಿಮಗೆ ಮೆಟ್ಟಿಲಾಗಲಿದೆ. ಎಲ್ಲಾ ವಯೋಮಾನದವರಿಗೂ ಅವಕಾಶವಿದ್ದು, ಇದೇ ದಿನಾಂಕ 11 ರಂದು ವಿದ್ಯಾನಗರದ ಶ್ರೀ ಸಾಯಿ ಭವನದಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಲಿದೆ ಎಂದು ಮಂಜುನಾಥ ಹೊಳೆಸಿರಿಗೆರೆ (94830-16034) ತಿಳಿಸಿದ್ದಾರೆ.

# ರಾಣೇಬೆನ್ನೂರಿನ ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಅರೇಮಲ್ಲಾಪುರ 110/33/11 ಕೆ.ವಿ ವಿದ್ಯುತ್ ವಿತರಣಾ ಉಪ ಕೇಂದ್ರದಿಂದದ ಅರೇಮಲ್ಲಾಪುರ 11 ಕೆ.ವಿ ಮಾರ್ಗಗಳ ಮೇಲೆ ಹೊಸದಾಗಿ ನಿರ್ಮಿಸುತ್ತಿರುವ 110 ಕೆವಿ ಬೇಲೂರು (ಹೀಲದಹಳ್ಳಿ) 110 ಕೆವಿ ಮಾರ್ಗದ ಗೋಪುರಗಳನ್ನು ಅಳವಡಿಸುವ ಕಾಮಗಾರಿ ಇರುವುದರಿಂದ ಮೆಡ್ಲೇರಿ ಶಾಖೆಯ ಎಲ್ಲಾ ಗ್ರಾಮಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

# ನಾಳೆ ಭೋವಿ ಸಮಾಜದ ಸಭೆ

ದಾವಣಗೆರೆ, ಜ.8- ಚಿತ್ರದುರ್ಗದ ಭೋವಿ ಗುರು ಪೀಠದಲ್ಲಿ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅಧ್ಯಕ್ಷತೆಯಲ್ಲಿ ದಿನಾಂಕ 10 ರ ಸೋಮವಾರ ಬೆಳಿಗ್ಗೆ 10.30 ಕ್ಕೆ ಜಿಲ್ಲಾ ಭೋವಿ ಸಮಾಜದ ಸಭೆ ಏರ್ಪಡಿಸಲಾಗಿದೆ.

ಜಿಲ್ಲೆಯ ಸಮಾಜ ಬಾಂಧವರು ಈ ಸಭೆಯಲ್ಲಿ ಭಾಗವಹಿಸುವಂತೆ ಎಂದು ಸಮಾಜದ ಕಾರ್ಯಾಧ್ಯಕ್ಷ ಹೆಚ್. ಜಯಣ್ಣ ಕೋರಿದ್ದಾರೆ.






# ಕೊರೊನಾ ಮಾರ್ಗಸೂಚಿ ಅವೈಜ್ಞಾನಿಕ



ದಾವಣಗೆರೆ,ಜ.8- ಓಮಿಕ್ರಾನ್ ವೈರಾಣು ತಡೆಗಟ್ಟುವ ಸಂಬಂಧ ಸರ್ಕಾರ ರೂಪಿಸಿರುವ ಮಾರ್ಗಸೂಚಿ ಕ್ರಮವನ್ನು ತರಾಟೆಗೆ ತೆಗೆದುಕೊಂಡಿರುವ ನಗರ ಪಾಲಿಕೆ ಮಾಜಿ ಸದಸ್ಯ ಶಿವನಳ್ಳಿ ರಮೇಶ್, ಈ ಮಾರ್ಗಸೂಚಿ ಅವೈಜ್ಞಾನಿಕವಾಗಿದೆ ಎಂದು ತಿಳಿಸಿದ್ದಾರೆ.

ಯಾವ ಕ್ರಮ ಕೈಗೊಂಡರೆ ಓಮಿಕ್ರಾನ್ ತಡೆಯಬಹುದು ಎಂಬುದನ್ನು ಅರಿಯದೇ ಸರ್ಕಾರ, ಜನಸಾಮಾನ್ಯರನ್ನು ಹಿಡಿದಿಟ್ಟುಕೊಂಡು ಅವರ ಸುಗಮ ಜೀವನಕ್ಕೆ ಸಂಚಕಾರ ತಂದೊಡ್ಡುವ ರೀತಿಯಲ್ಲಿ ಮಾರ್ಗಸೂಚಿ ಮೂಲಕ ಜೀವನವನ್ನೇ ಮಾಡದಂತೆ ಕರ್ಫ್ಯೂ ವಿಧಿಸಲಾಗಿದೆ ಎಂದು ಕಿಡಿ ಕಾರಿದ್ದಾರೆ.

ಐಷಾರಾಮಿ ಜೀವನ ಮಾಡುವಂತಹ ಹೊರ ಸಂಚಾರಕ್ಕೆ ಹೋಗುವ ಜನರನ್ನು ತಡೆಯಬೇಕು. ರಾಜಕೀಯ ಸಭೆ - ಸಮಾರಂಭಗಳನ್ನು ನಿಷೇಧಿಸಬೇಕು. ಆಡಂಬರದ ಮದುವೆಗಳನ್ನು ನಿಲ್ಲಿಸಬೇಕು. ಅಂಧ ಭಕ್ತಿಯನ್ನು ಪ್ರತಿಪಾದಿಸುವ ಜಾತ್ರೆ - ರಥೋತ್ಸವಗಳ ಮೇಲೆ ನಿಷೇಧ ಹೇರಬೇಕು. ಮುಖ್ಯವಾಗಿರುವ ಇವುಗಳ ವಿರುದ್ಧ ಕಠಿಣ ಕ್ರಮ ಕೈಗೊಂಡರೆ ಓಮಿಕ್ರಾನ್ ತಡೆಯಬಹುದು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಹೊರ ಸಂಚಾರ, ರಾಜಕೀಯ ಸಭೆ - ಸಮಾರಂಭ, ಆಡಂಬರದ ಮದುವೆ, ಜಾತ್ರೆಗಳಲ್ಲಿ ಶಾಸಕರು, ಮಂತ್ರಿಗಳು ಭಾಗವಹಿಸುತ್ತಿದ್ದರೆ ಓಮಿಕ್ರಾನ್ ತಡೆಯಲು ಸಾಧ್ಯವೇ ? ಎಂದು ಪ್ರಶ್ನಿಸಿರುವ ಅವರು, ಸರ್ಕಾರದ ಮಾರ್ಗಸೂಚಿ ಶ್ರೀಮಂತರಿಗೆ ಒಂದು ನ್ಯಾಯ, ಬಡವರಿಗೆ ಮತ್ತೊಂದು ನ್ಯಾಯ ಎನ್ನುವಂತಿದೆ ಎಂದು ಜರಿದಿದ್ದಾರೆ.

ಜನತಾ ಕರ್ಫ್ಯೂ ಹಾಕುವುದರಿಂದ ಜನ ಸಾಮಾನ್ಯರು ಬದುಕು ಕಟ್ಟಿಕೊಳ್ಳಲು ಸಾಧ್ಯವಾಗುವುದಿಲ್ಲ. ಅಂದಿನ ಬದುಕನ್ನು ಅಂದೇ ಕಟ್ಟಿಕೊಳ್ಳುವ ಬಡವರನ್ನು ತೀವ್ರ ಸಂಕಷ್ಟಕ್ಕೆ ತಳ್ಳುವಂತಹ ಕೆಲಸವನ್ನು ಸರ್ಕಾರ ಮಾಡುತ್ತಿದೆ ಎಂದಿರುವ ಶಿವನಳ್ಳಿ, ಯಥೇಚ್ಛವಾಗಿ ಓಡಾಡುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ಓಮಿಕ್ರಾನ್ ತಡೆಗಟ್ಟುವುದು ಕೇವಲ ಸರ್ಕಾರದ ಕೆಲಸವಲ್ಲ. ಅದರಲ್ಲಿ ಜನರ ಜವಾಬ್ದಾರಿಯೂ ಇದೆ. ಮಾಸ್ಕ್ ಹಾಕುವುದು, ಅಂತರ ಕಾಪಾಡಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಬೇಕು ಎಂದು ಶಿವನಳ್ಳಿ ರಮೇಶ್ ಕಳಕಳಿ ವ್ಯಕ್ತಪಡಿಸಿದ್ದಾರೆ.

# ದಾವಣಗೆರೆ ವಿವಿ ಘಟಿಕೋತ್ಸವ ಪದವಿ ಪ್ರಮಾಣ ಪತ್ರಕ್ಕೆ ಅರ್ಜಿ

ದಾವಣಗೆರೆ,ಜ.8- ವಿವಿಯ 9ನೇ ವಾರ್ಷಿಕ ಘಟಿಕೋತ್ಸವವು ಜನವರಿ ತಿಂಗಳಲ್ಲಿ ಜರುಗಲಿದ್ದು, ಪದವಿ, ಸ್ನಾತಕೋತ್ತರ ಪದವಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ಪ್ರದಾನ ಮಾಡಲಾಗುವುದು. ಇದಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕುಲಸಚಿವರು (ಪರೀಕ್ಷಾಂಗ) ಕಾರ್ಯಾಲಯ ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ಅಥವಾ ಇ-ಮೇಲ್ dudsupport@uniclare.com convocation @davanagereuniversity.ac.in ಸಂದೇಶ ಕಳುಹಿಸಬಹುದು. ಸಹಾಯವಾಣಿ ಸಂಖ್ಯೆ: 6363341215. 6363337901, 6363351762ಗೆ ಸಂಪರ್ಕಿಸಬಹುದು.

# ಬಡವರಿಗೆ, ಬುದ್ಧಿಮಾಂದ್ಯರಿಗೆ ರಗ್ಗು ವಿತರಣೆ



ದಾವಣಗೆರೆ, ಜ. 8- ಪಾಲಿಕೆ 15ನೇ ವಾರ್ಡಿನ ಸದಸ್ಯರಾದ ಶ್ರೀಮತಿ ಆಶಾ ಉಮೇಶ್ ಮತ್ತು ಕಾಂಗ್ರೆಸ್ ಮುಖಂಡ ಉಮೇಶ್ ದಂಪತಿ ಹಾಗೂ ಸ್ನೇಹಿತರಾದ ಸುನೀಲ್, ನಟರಾಜ್ ಅವರು ಬುದ್ಧಿಮಾಂದ್ಯ ಮಕ್ಕಳಿಗೆ ಹಾಗೂ ದೇವರಾಜ ಅರಸು ಬಡಾವಣೆಯ ಬಡವರಿಗೆ ರಗ್ಗು ವಿತರಣೆ ಮಾಡಿದರು.

# ಭಾರತೀಯ ವಿದ್ಯಾಸಂಸ್ಥೆಯಲ್ಲಿ ಲಸಿಕೆ

**ಹೊನ್ನಾಳಿ**

ಹೊನ್ನಾಳಿ, ಜ.8 - ಪಟ್ಟಣದ ಭಾರತೀಯ ವಿದ್ಯಾ ಸಂಸ್ಥೆಯಲ್ಲಿಂದು ಶಾಲಾ ವಿದ್ಯಾರ್ಥಿಗಳಿಗೆ ಲಸಿಕೆ ನೀಡಲಾಯಿತು. ಈ ಸಂದರ್ಭದಲ್ಲಿ ಮುಖ್ಯ ಶಿಕ್ಷಕಿ ದೇವೀರಮ್ಮ, ಸಂಸ್ಥೆಯ ನಿರ್ದೇಶಕರಾದ ಗುರುದತ್ ನಾಮದೇವ್, ಡಾ.ವಿದ್ಯಾ, ಸಹ ಶಿಕ್ಷಕರಾದ ಪುನೀತ್, ಶರತ್, ಚೇತನ, ಗೀತಾ ಹಿರೇಮಠ್, ಪ್ರತಿಭಾ, ತಿಮ್ಮೇಶ, ಅಣ್ಣಪ್ಪ, ರವಿಕುಮಾರ್, ಅಕ್ಷತಾ ಹಾಗೂ ಆಶಾ ಕಾರ್ಯಕರ್ತರು ಇದ್ದರು.

# ನಗರದಲ್ಲಿ ಇಂದು ಜಿಲ್ಲಾ ಜಾನಪದ ಪರಿಷತ್ ಸಭೆ

ಕರ್ನಾಟಕ ಜಾನಪದ ಪರಿಷತ್ ನ ಜಿಲ್ಲಾ ಘಟಕದ ಸಮಾಲೋಚನಾ ಸಭೆಯನ್ನು ಜಿಲ್ಲಾಧ್ಯಕ್ಷ ಡಾ. ಹೆಚ್. ವಿಶ್ವನಾಥ್ ಅಧ್ಯಕ್ಷತೆಯಲ್ಲಿ ಗಂಗಾಮತಸ್ಥರ ವಿದ್ಯಾರ್ಥಿ ನಿಲಯದಲ್ಲಿ ಇಂದು ಕರೆಯಲಾಗಿದೆ ಎಂದು ಸಂಚಾಲಕ ಗಂಗಾಧರ ಬಿ. ಎಲ್. ನಿಟ್ಟೂರ್ (8867702396, 9945599925) ತಿಳಿಸಿದ್ದಾರೆ.


**ANVITH ENTERPRISES**
**FINANCIAL ADVISOR®**
**P.J. EXTENSION, DAVANGERE-577 004.**

1) ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆಯಿಂದ ನಷ್ಟವನ್ನು ಅನುಭವಿಸಿದ್ದೀರಾ?
2) ಪ್ರತಿದಿನದ ಭಾರೀ ಏರುಪೇರಿನ ವಹಿವಾಟಿಗೆ ಹಣವನ್ನು ಹೇಗೆ ಹೂಡಿಕೆ ಮಾಡಬೇಕೆಂಬ ಗೊಂದಲವೇ? ಈ ಸಮಸ್ಯೆಗಳಿಂದ ಮುಕ್ತರಾಗಿ.
3) Long-Term ಮತ್ತು Short-Term ಹೂಡಿಕೆ ಮುಖಾಂತರ ಸುರಕ್ಷಿತವಾಗಿ ಉತ್ತಮ ಲಾಭವನ್ನು ಪಡೆಯಲು ಹಾಗೂ
4) ಪ್ರತಿ ತಿಂಗಳ ಸಾಲದ EMI ನಿಂದ ಮುಕ್ತರಾಗಿ ಮಕ್ಕಳ ಶಿಕ್ಷಣ ಮತ್ತು ನಿಮ್ಮ ನಿವೃತ್ತಿ ಜೀವನದ ನೆಮ್ಮದಿಯ ದಿನಗಳಿಗಾಗಿ ಉಳಿತಾಯದ ಹೆಜ್ಜೆಗೆ ಸಾಗಲು Children's Savings Plans, Retirement Plans, Income-Tax Saving Plans, Health plans, Term Plans ಹಾಗೂ ಆರ್ಥಿಕವಾಗಿ ಸಬಲರಾಗಲು ಸಂಪರ್ಕಿಸಿ :

**VIJAYA NIRANJANA MYLARA-8792673593**

## ಕದಳಿಗೆ ಸಾವಿತ್ರಮ್ಮ ಗೌರವಾಧ್ಯಕ್ಷೆ



ದಾವಣಗೆರೆ, ಜ. 8- ನಗರದ ಕದಳಿ ಮಹಿಳಾ ವೇದಿಕೆಯ ಗೌರವಾಧ್ಯಕ್ಷರಾಗಿ ಶ್ರೀಮತಿ ಸಾವಿತ್ರಮ್ಮ ಸಿದ್ದಪ್ಪ ಕಾರ್ಯ ನಿರ್ವಹಿಸಲಿದ್ದಾರೆ. ಸಾವಿತ್ರಮ್ಮ, ಕದಳಿ ಮಹಿಳಾ ವೇದಿಕೆಯ ಸಲಹಾ ಸಮಿತಿಯ ಸದಸ್ಯರೂ ಆಗಿದ್ದಾರೆ.

## ನಿಟುವಳ್ಳಿ : ನಾಳೆ ವಿದ್ಯುತ್ ವ್ಯತ್ಯಯ

ದಾವಣಗೆರೆ, ಜ.8- ನಿಟುವಳ್ಳಿ ಹಾಗು ನಿಟುವಳ್ಳಿ ಹೊಸಬಡಾವಣೆ, ದುರ್ಗಾಂಬಿಕ ದೇವಸ್ಥಾನ , 60 ಅಡಿ ರಸ್ತೆ ಹಾಗೂ ಸುತ್ತಮುತ್ತ ನಾಡಿದ್ದು ದಿನಾಂಕ 10ರ ಸೋಮವಾರ ವಿದ್ಯುತ್ ಇರುವುದಿಲ್ಲ .






## 107 ಕೋಟಿ ವಂಚನೆ : ಖಾಸಗಿ ವಿವಿ ಮಾಜಿ ಕುಲಪತಿ ಬಂಧನ

ನವದೆಹಲಿ ಜ. 8 – ಸುಮಾರು 4,500 ವಿದ್ಯಾರ್ಥಿಗಳಿಗೆ 107 ಕೋಟಿ ರೂ. ವಂಚಿಸಿದ ಆರೋಪದ ಮೇಲೆ ಬೆಂಗಳೂರಿನ ಖಾಸಗಿ ವಿ.ವಿ.ವೊಂದರ ಮಾಜಿ ಕುಲಪತಿಯೊಬ್ಬರನ್ನು ಜಾರಿ ನಿರ್ದೇಶನಾಲಯ ಬಂಧಿಸಿದೆ. ಅಲೈಯನ್ಸ್ ಯೂನಿವರ್ಸಿಟಿಯ ಮಾಜಿ ಕುಲಪತಿ ಮಧುಕರ್ ಜಿ. ಅಂಗುರ್ ಶುಲ್ಕ ಪಾವತಿ ಹೆಸರಿನಲ್ಲಿ ಹಣ ಪಡೆದು ವಂಚಿಸಿರುವುದಾಗಿ ಆರೋಪಿಸಲಾಗಿದೆ. ನಿನ್ನೆ ಆರೋಪಿಯನ್ನು ಬಂಧಿಸಲಾಗಿದೆ. ಬೆಂಗಳೂರಿನ ಪಿ.ಎಂ.ಎಲ್.ಎ. ನ್ಯಾಯಾಲಯದ ಎದುರು ಹಾಜರುಪಡಿಸಿದ ನಂತರ, ಏಳು ದಿನಗಳ ಕಾಲ ನ್ಯಾಯಾಂಗ ಕಸ್ಟಡಿಗೆ ವಹಿಸಲಾಗಿದೆ. ಅಲೈಯನ್ಸ್ ವಿ.ವಿ ಶುಲ್ಕವನ್ನು ಅಧಿಕೃತ ಖಾತೆಗೆ ಜಮಾ ಮಾಡದೇ ಅಕ್ರಮವಾಗಿ ತೆರೆಯಲಾಗಿದ್ದ ತನ್ನ ಖಾತೆಗೆ ಜಮಾ ಮಾಡುವಂತೆ ಅಂಗುರ್ ತಿಳಿಸಿದ್ದರು. ಹೀಗಾಗಿ 4,500 ವಿದ್ಯಾರ್ಥಿಗಳು ಶುಲ್ಕವನ್ನು ಅಕ್ರಮವಾಗಿ ತೆರೆಯಲಾಗಿದ್ದ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಿದ್ದರು. ಅಂಗುರ್ ಹಾಗೂ ಇತರರು ವಿದ್ಯಾರ್ಥಿಗಳ ಶುಲ್ಕವನ್ನು ಅಕ್ರಮವಾಗಿ ಪಡೆದು ವಂಚಿಸಿದ್ದಾರೆ ಎಂದು ಆರೋಪಿಸಲಾಗಿದೆ.

## ಪುಣ್ಯಸ್ಮರಣೆ





**ದಿ|| ಶ್ರೀ ಪಾಲ್ದರ್‌ಗೌಡ್ರು ಕೆಂಚಪ್ಪರ ದಾನಪ್ಪನವರು**
36ನೇ ವರ್ಷದ ಪುಣ್ಯಸ್ಮರಣೆ

**ದಿ|| ಶ್ರೀಮತಿ ನಂಜಮ್ಮ ಕುಂಬಳೂರು**
30ನೇ ವರ್ಷದ ಪುಣ್ಯಸ್ಮರಣೆ

ನಿಮ್ಮ ಆದರ್ಶ ವಿಚಾರ ಆಚಾರಗಳನ್ನು ಇಂದಿಗೂ ಪಾಲಿಸುತ್ತಾ
ಸದಾ ನಿಮ್ಮನ್ನು ಸ್ಮರಿಸುತ್ತಿರುವ

- ದಿ|| ಶ್ರೀಮತಿ ಯೋಗೇಶ್ವರಮ್ಮ ದಿ|| ಶ್ರೀ ಕೆ. ಕರೆಗೌಡಪ್ಪ ಮತ್ತು ಮಕ್ಕಳು
- ಶ್ರೀಮತಿ ಕಾಮಾಕ್ಷಮ್ಮ ಶ್ರೀ ಕೆ. ನಾಗರಾಜಪ್ಪ ಮತ್ತು ಮಕ್ಕಳು
- ಶ್ರೀಮತಿ ಯಶೋಧಮ್ಮ ದಿ|| ಶ್ರೀ ಕೆ. ಹನಮಂತಪ್ಪ ಮತ್ತು ಮಕ್ಕಳು
- ಶ್ರೀಮತಿ ಡಿ. ಗೀತಾ ಶ್ರೀ ಕೆ. ನಿಜಲಿಂಗಪ್ಪ ಮತ್ತು ಮಕ್ಕಳು
- ಶ್ರೀಮತಿ ಶಕುಂತಲ ಶ್ರೀ ಕೆ. ಯಶವಂತಕುಮಾರ್ ಮತ್ತು ಮಕ್ಕಳು
- ಶ್ರೀಮತಿ ಕೆ. ಎನ್. ಅಶ್ವಿನಿ ಶ್ರೀ ಶ್ರೀಕಾಂತ್ ಡಿ. ಮತ್ತು ಮಕ್ಕಳು
- ಶ್ರೀಮತಿ ಕೆ. ಎನ್. ಅನಿತ ಶ್ರೀ ಶರತ್‌ಕುಮಾರ್ ಎಸ್. ಆರ್. ಮತ್ತು ಮಕ್ಕಳು
- ಶ್ರೀಮತಿ ಪಿ. ದೇವಿಕ ಶ್ರೀ ಬಸವನಗೌಡ ಕೆ.ಎನ್. (ಅಕ್ಷಯ) ಮತ್ತು ಮಕ್ಕಳು

ಮರಿಮೊಮ್ಮಕ್ಕಳಾದ : * ಅಶಿತ್ * ಕುಶಾಲ್ * ಆದ್ಯಾಗೌಡ

**ಶ್ರೀ ಮಂಜುನಾಥ ಎಂಟರ್‌ಪ್ರೈಸಸ್**
ಸಿಮೆಂಟ್ ಹಾಗೂ ಸ್ಟೀಲ್ ಮಾರಾಟಗಾರರು
ನಂ. 897, ಕೆನರಾ ಬ್ಯಾಂಕ್ ಪಕ್ಕ (ಹಳೇ ಸಿಂಡಿಕೇಟ್ ಬ್ಯಾಂಕ್)
2ನೇ ಹಂತ, ಶಿವಕುಮಾರಸ್ವಾಮಿ ಲೇಔಟ್,
ಹದಡಿ ರೋಡ್, ದಾವಣಗೆರೆ-5
ಮೊ : 9844477444, 9535999631

**ಎನ್.ಜಿ. ಕನ್‌ಸ್ಟ್ರಕ್ಷನ್ಸ್**
ಪ್ಲಾನರ್ಸ್ । ಇಂಜನಿಯರ್ಸ್ । ಆರ್ಕಿಟೆಕ್ಟ್ಸ್
ನಂ. 897, ಕೆನರಾ ಬ್ಯಾಂಕ್ ಪಕ್ಕ (ಹಳೇ ಸಿಂಡಿಕೇಟ್ ಬ್ಯಾಂಕ್)
2ನೇ ಹಂತ, ಶಿವಕುಮಾರಸ್ವಾಮಿ ಲೇಔಟ್,
ಹದಡಿ ರೋಡ್, ದಾವಣಗೆರೆ-5
ಮೊ : 7259902092

## ಎನ್.ಎಂ. ಕಾಡಯ್ಯನಮಠ ನಿಧನ



ದಾವಣಗೆರೆ ವಿನೋಬನಗರ 1ನೇ ಮೇನ್, 2ನೇ ಕ್ರಾಸ್ (ಶ್ರೀ ಶಂಭುಲಿಂಗೇಶ್ವರ ಸ್ವಾಮಿ ದೇವಸ್ಥಾನದ ಎದುರು) ವಾಸಿ **ಎನ್.ಎಂ. ಕಾಡಯ್ಯನಮಠ (76)** ಅವರು, ದಿನಾಂಕ 8.1.2022ರ ಶನಿವಾರ ರಾತ್ರಿ 12 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ದಿನಾಂಕ 9.1.2022ರ ಭಾನುವಾರ ಮಧ್ಯಾಹ್ನ 3 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

- ಇಂತಿ ದುಃಖತಪ್ತ ಕುಟುಂಬ ವರ್ಗ

||ಶ್ರೀ ಗುರು ಕೊಟ್ಟೂರೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ



ದಾವಣಗೆರೆ ವಾಸಿ
**ಬಿ.ಆರ್. ನಾಗರತ್ನಮ್ಮ**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 01.01.2022ನೇ ಶನಿವಾರ ರಾತ್ರಿ 8.25ಕ್ಕೆ ನನ್ನ ಪತಿಯವರಾದ
**ಶ್ರೀ ಎನ್.ಪಿ. ಪಂಚಾಕ್ಷರಪ್ಪ**
ಭದ್ರಾ ಸಕ್ಕರೆ ಕಾರ್ಖಾನೆಯ ನಿವೃತ್ತ ಕ್ಯಾಷಿಯರ್
ಇವರು ದೈವಾಧೀನರಾಗಿರುತ್ತಾರೆಂದು ತಿಳಿಸಲು ವಿಷಾದಿಸುತ್ತೇವೆ. ಆದ ಪ್ರಯುಕ್ತ ಮೃತರ ಆತ್ಮ ಶಾಂತಿಗಾಗಿ
**'ಕೈಲಾಸ ಶಿವಗಣಾರಾಧನೆ'ಯನ್ನು**
ದಿನಾಂಕ : 09.01.2022ನೇ ಭಾನುವಾರ ಬೆಳಿಗ್ಗೆ 11.30ಕ್ಕೆ ಮೃತರ ಸ್ವಗೃಹ #1653/48, 4ನೇ ಮೇನ್, ಸಿದ್ದವೀರಪ್ಪ ಬಡಾವಣೆ-4. ದಾವಣಗೆರೆಯಲ್ಲಿ ನೆರವೇರಿಸಲಾಗುವುದು. ಆದ ಕಾರಣ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ಇಂತಿ ದುಃಖತಪ್ತರು :
ಮೃತರ ಧರ್ಮಪತ್ನಿ : ಬಿ.ಆರ್. ನಾಗರತ್ನಮ್ಮ ಮತ್ತು ಮಕ್ಕಳು
ಸೊಸೆ, ಅಳಿಯಂದಿರು, ಮೊಮ್ಮಕ್ಕಳು, ರಾಂಪುರದ ವಂಶಸ್ಥರು ಬೆಳಗುತ್ತಿ, ನಾಗಪ್ಪನವರ ವಂಶಸ್ಥರು, ಕಮಲಾಪುರ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು. ಫೋ. : 98445 31937

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

|| ಶ್ರೀ ಗಿರಿ ಮಲ್ಲೇಶ್ವರ ಪ್ರಸನ್ನ ||

## 17ನೇ ವರ್ಷದ ಚಿರಸ್ಮರಣೆ





ಶ್ರೀ ಸ.ಸ. ಕಲ್ಮೇಶ್ವರ ಮಹಾರಾಜರ ಶಿಷ್ಯರಾದ
**ಸಂತ ಹೆಚ್.ಡಿ. ಹನುಮಂತಪ್ಪನವರು**
(ಮಾಜಿ ಅಧ್ಯಕ್ಷರು, ನಗರ ಕಾಂಗ್ರೆಸ್ ಸಮಿತಿ, ದಾವಣಗೆರೆ.)

ನೀವು ನಮ್ಮನ್ನಗಲಿ ದಿನಾಂಕ 09.01.2022ಕ್ಕೆ 17 ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಧರ್ಮಪತ್ನಿ : ಶ್ರೀಮತಿ ಬಸಮ್ಮ ಹನುಮಂತಪ್ಪ
ಮಾಜಿ ಸದಸ್ಯರು, ದಾವಣಗೆರೆ ಮಹಾನಗರ ಪಾಲಿಕೆ ಮತ್ತು ನಗರಸಭೆ ಮಾಜಿ ಸದಸ್ಯರು
ಹಾಗೂ ಮಕ್ಕಳು ಮತ್ತು ಮೊಮ್ಮಕ್ಕಳು, ಬಂಧು-ಮಿತ್ರರು.


**SHREE VEERABHADRESHWARA CONSULTANCY SERVICES**

*CIVIL ENGINEERS AND DEVELOPERS*
# 80/18, Opp. P.J. Lodge, A.V.K. College Road, P.J. Extension, DAVANGERE-577 002.
Cell: 9916173399, 9343277422

*WE OFFER THE FOLLOWING SERVICE :*
✦ CONSTRUCTION CONSULTANTS
✦ ARCHITECTURAL VASTU PLAN
✦ ESTIMATION & VALUATION
✦ 3D VIEW & INTERIOR DESIGN .
✦ ASSISTANCE FOR BUILDING LICENSE PLAN
✦ ASSISTANCE FOR LAY OUT DESIGN & LAND DEVELOPMENT
✦ A4 TO AO PLOTTER PRINTS & BLUE PRINTS


## ಒಂಭತ್ತನೇ ವರ್ಷದ ಪುಣ್ಯಸ್ಮರಣೆ



ನಿಧನ : 09.01.2013

**ದಿ. ಗಾಯತ್ರಿ ಬಸವರಾಜ್**

ನೀವು ನಮ್ಮನ್ನಗಲಿ ಇಂದಿಗೆ ಒಂಭತ್ತು ವರ್ಷಗಳಾದವು.
ನೀವು ನಮ್ಮಿಂದ ದೂರವಾದರೂ ನೀವು ಹಾಕಿಕೊಟ್ಟ ಮಾರ್ಗದರ್ಶನ ಕುಟುಂಬ ವರ್ಗಕ್ಕೆ ಆದರ್ಶವಾಗಿದೆ.
ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲಿ.
ನೀವು ತೋರಿಸಿಕೊಟ್ಟ ಸನ್ಮಾರ್ಗದಲ್ಲೇ ಸದಾ ಮುನ್ನಡೆಯುತ್ತಿರುವ,
ದುಃಖತಪ್ತ ಕುಟುಂಬ ವರ್ಗ

ಪತಿ : ಐ. ಬಸವರಾಜಪ್ಪ,
ವರ್ತಕರು ಹಾಗೂ ಮಾಜಿ ಅಧ್ಯಕ್ಷರು, ಕನಕ ಕೋ-ಆಪರೇಟಿವ್ ಬ್ಯಾಂಕ್, ದಾವಣಗೆರೆ.
ಮಕ್ಕಳು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು, ದಾವಣಗೆರೆ.






## ಐದನೇ ವರ್ಷದ ಪುಣ್ಯ ಸ್ಮರಣೆ



ನಿಧನ : 09.01.2017

**ಹುಲ್ಲುಮನೆ ಯಲ್ಲಪ್ಪರ ಶ್ರೀಮತಿ ಹನುಮಮ್ಮ**

ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳಾದವು
ನಿಮ್ಮ ಆದರ್ಶಗಳು ನಮಗೆ ದಾರಿದೀಪ ಸದಾ ನಿಮ್ಮ ಸ್ಮರಣೆಯಲ್ಲಿರುವ ...

ಶ್ರೀ ಹುಲ್ಲುಮನೆ ಯಲ್ಲಪ್ಪರ ಹನುಮಂತಪ್ಪ ಮತ್ತು ಮಕ್ಕಳು
ಶ್ರೀ ಹುಲ್ಲುಮನೆ ಯಲ್ಲಪ್ಪರ ರಾಮಚಂದ್ರಪ್ಪ ಮತ್ತು ಮಕ್ಕಳು
ಸಹೋದರಿಯರು, ಅಳಿಯಂದಿರು, ಮೊಮ್ಮಕ್ಕಳು
ಹುಲ್ಲುಮನೆ ವಂಶಸ್ಥರು ಹಾಗೂ ಬಂಧು-ಮಿತ್ರರು
ನಿಟುವಳ್ಳಿ, ದಾವಣಗೆರೆ, ಫೋನ್ : 97385 81459, 90089 69070

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte